ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 1
Pages - 24
₹ - 12
January- 2015

## ಭಾರತ ರತ್ನ ಪುರಸ್ಕೃತರು




ಅಟಲ್ ಬಿಹಾರಿ ವಾಜಪೇಯಿ
ಮದನ ಮೋಹನ ಮಾಳವೀಯ



ಹೊಸ ವರ್ಷ 2015



ಜನವರಿ 1
ಸೌಹಾರ್ದ ಸಹಕಾರಿ ದಿನಾಚರಣೆ





ಜನವರಿ 15
ಸಂಕ್ರಾಂತಿ



ಜನವರಿ 26
ಗಣರಾಜ್ಯೋತ್ಸವ

ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 3070 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 727



“ಸಹಕಾರಿ ಕ್ಷೇತ್ರವನ್ನು ಪುನರ್‌ಸಂಘಟಿಸುವ ನಿಟ್ಟಿನಲ್ಲಿ ಸಹಕಾರಿಗಳಿಗೆ ವ್ಯವಹಾರಿಕ ಸ್ವಾತಂತ್ರವನ್ನು ಹಾಗೂ ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವುದಕ್ಕಾಗಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 14 ವರ್ಷಗಳು ಕಳೆದಿವೆ. 15 ನೇ ವರ್ಷದಲ್ಲಿ ಪಾದಾರ್ಪಣವಾಗಿದೆ.”

# ಹೊಸ ವರ್ಷ ಹೊಸ ಉತ್ಸಾಹ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ನಾಂದಿಯಾಗಲಿ

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ನೂತನ ವರ್ಷ 2015, ಮಕರ ಸಂಕ್ರಾಂತಿ, 66ನೇ ಗಣರಾಜ್ಯೋತ್ಸವದ ಹಾಗೂ ಸೌಹಾರ್ದ ಸಹಕಾರಿ ದಿನ ಆಚರಣೆಯ ಹಾರ್ದಿಕ ಶುಭಾಶಯಗಳು.

ದೇಶ ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿ ಸಂವಿಧಾನ ರಚನೆ ಮಾಡಿ ಅದನ್ನು ಇದೇ ದಿನಾಂಕ 26 ಜನವರಿ 1950 ರಂದು ಜಾರಿಗೆ ತಂದು ಇಂದಿಗೆ 65 ವರ್ಷಗಳು ಕಳೆದಿವೆ. ದೇಶದ ಜನರಲ್ಲಿ ಸ್ವಾತಂತ್ರ್ಯವನ್ನು ಗಳಿಸುವಲ್ಲಿ ಹೋರಾಡಿದ ಜನರ ಬಗ್ಗೆ ಗೌರವವಿದೆ, ಆದರವಿದೆ. ನಾಗರೀಕತೆ ಪ್ರಜ್ಞೆ ಹೆಚ್ಚುತ್ತಿದೆ. ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ದೇಶ ಅಭಿವೃದ್ಧಿ ಪಥದಲ್ಲಿದೆ. ಸಮೃದ್ಧಿಯತ್ತ ಸಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರದ ಸಾಲಿನಲ್ಲಿ ಸ್ಥಾನವನ್ನು ಪಡೆದಿದೆ. ವಿಶ್ವದ ನಕ್ಷೆಯಲ್ಲಿ ಭಾರತ ದೇಶ ವೈಜ್ಞಾನಿಕವಾಗಿ, ತಾಂತ್ರಿಕತವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ವಿಶ್ವದಲ್ಲಿ ಮೊದಲ ಸ್ಥಾನದಲ್ಲಿರುವಂತೆ ಈ ನೂತನ ವರ್ಷ ನಮಗೆ ಸ್ಫೂರ್ತಿ, ಶಕ್ತಿ ನೀಡಲಿ ಎಂದು ಆಶಿಸುತ್ತೇನೆ.

ಬಂಧುಗಳೆ, ಸಹಕಾರಿ ಕ್ಷೇತ್ರವನ್ನು ಪುನರ್‌ಸಂಘಟಿಸುವ ನಿಟ್ಟಿನಲ್ಲಿ ಸಹಕಾರಿಗಳಿಗೆ ವ್ಯವಹಾರಿಕ ಸ್ವಾತಂತ್ರ್ಯವನ್ನು ಹಾಗೂ ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡುವುದಕ್ಕಾಗಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 14 ವರ್ಷಗಳು ಕಳೆದಿವೆ. 15 ನೇ ವರ್ಷದಲ್ಲಿ ಪಾದಾರ್ಪಣವಾಗಿದೆ. ಈ ಹಂತದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಲ್ಲಿ 3070ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ರಚನೆಯಾಗಿವೆ. ಈ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಒಂದು ರೀತಿಯ ಪರಿವರ್ತನೆಯ ಅಲೆ ಪ್ರಾರಂಭಿಸಿವೆ. ಸರಕಾರಗಳ, ಸಾರ್ವಜನಿಕರ, ಸಹಕಾರಿಗಳ ಹಾಗೂ ಆರ್ಥಿಕ ತಜ್ಞರ ಗಮನಸೆಳೆದಿವೆ. ವ್ಯವಸ್ಥೆಯ ಮುಖ್ಯವಾಹಿನಿಯಲ್ಲಿ ಸ್ಥಾನ ಪಡೆದಿವೆ.

1ನೇ ಜನವರಿಯನ್ನು ಪ್ರತಿವರ್ಷ ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಈ ದಿನದ ಆಚರಣೆ ಅರ್ಥಪೂರ್ಣವಾಗಿರುವಂತೆ ಮಾಡುವುದು ಸಹಕಾರಿಗಳ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು, ಸಿಬ್ಬಂದಿಯವರ ಮೇಲೆ ಅವಲಂಬಿತವಾಗಿದೆ. ಸದಸ್ಯತ್ವದ ನೋಂದಣಿ ಅಭಿಯಾನ, ಹೊಸ ಕಾರ್ಯಕ್ರಮಗಳ ಘೋಷಣೆ ಹಾಗೂ ಪ್ರಾರಂಭಿಸುವುದು, ಕಾರ್ಯಾಗಾರಗಳನ್ನು ಏರ್ಪಡಿಸುವುದು, ಸ್ವಚ್ಛತಾ ಆಂದೋಲನ ಏರ್ಪಡಿಸುವುದು, ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಶಾಲಾ ಕಾಲೇಜುಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ನಿಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸೌಹಾರ್ದ ಸಹಕಾರಿ ದಿನದ ಅರ್ಥಪೂರ್ಣ ಆಚರಣೆಯಾಗಲಿ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಯಾವುದೇ ಅಡ್ಡಿ ಆತಂಕಗಳಿಲ್ಲದಂತೆ ಬೆಳೆಯಲು ಈ ನೂತನ ವರ್ಷ ಸಹಕಾರಿಯಾಗಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜಿ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

## ಒಳ ಪುಟಗಳಲ್ಲಿ . . .

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ದಿನ ಹಾಗೂ ಸ್ವಚ್ಛತಾ ಸಪ್ತಾಹ................ 4

ಕೂಡಲಸಂಗಮದಲ್ಲಿ ವ್ಯಕ್ತಿತ್ವ ವಿಕಸನದ 12ನೇ ತಂಡದ ಕಾರ್ಯಕ್ರಮ ........................................................ 9

ತರಬೇತಿಯಿಂದ ವ್ಯಕ್ತಿಯ ಮಾನ್ಯತೆ ಸಂಸ್ಥೆಯ ಘನತೆ ಹೆಚ್ಚುತ್ತದೆ : ಸಮಾರೋಪ ಕಾರ್ಯಕ್ರಮದಲ್ಲಿ ಕೋಂಕೋಡಿ ಪದ್ಮನಾಭ .... 10

ತರಬೇತಿ ಕಾರ್ಯಕ್ರಮದ ಬಗ್ಗೆ ಶಿಬಿರಾರ್ಥಿಗಳ ಅನಿಸಿಕೆಗಳು ..... 12-13

ಕೂಡಲಸಂಗಮದಲ್ಲಿ ಸಹಕಾರಿಗಳ ಸಂಗಮ ...................... 14

ಸಹಕಾರ ಸಂಸ್ಥೆಗಳು ಬಡವರ ಆಶಾಕಿರಣ, ಪ್ರಾಣ ಸಂಜೀವಿನಿ ಗೋವಿಂದ ಕಾರಜೋಳ ................................................ 15

ಮುಖ್ಯಕಾರ್ಯನಿರ್ವಾಹಕರು ತಮ್ಮ ತಮ್ಮ ಸಂಸ್ಥೆಗೆ ಆಸ್ತಿಗಳಾಗಬೇಕು : ಶ್ರೀ ಗುರುನಾಥ ಜ್ಯಾಂತಿಕರ ................ 17

13 ವರ್ಷಗಳಲ್ಲಿ ಬಹಳಷ್ಟು ಸೌಹಾರ್ದ ಸಹಕಾರಿಗಳು ಜನ್ಮ ತಾಳಿ ಉತ್ತಮ ಸೇವೆ ಸಲ್ಲಿಸುತ್ತಿವೆ - ಶ್ರೀ ಗುರುನಾಥ ಜ್ಯಾಂತಿಕರ .... 19

ಸೌಹಾರ್ದ ಸಹಕಾರಿಯು ಬಡವರ ಕಲ್ಪವೃಕ್ಷವಾಗಿದೆ - ಶ್ರೀ ಗುರುನಾಥ ಜ್ಯಾಂತಿಕರ ............................................ 20

Guidelines for Licensing of Small Finance Banks in the Private Sector ............................................................ 21

ಇ - ಸ್ಟಾಂಪಿಂಗ್ ಕೇಂದ್ರಗಳಿಗೆ ಮಾರ್ಗದರ್ಶಿ ............ 23-24

# ಸಂಪಾದಕೀಯ

## ಶಿಬಿರಾರ್ಥಿಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಮೆಚ್ಚುಗೆ ಪಡೆದ ತರಬೇತಿ ಆಡಳಿತ ಮಂಡಲಿಯ ಆಸಕ್ತಿ ಹಾಗೂ ಪ್ರೋತ್ಸಾಹ ಪ್ರತಿ ತಂಡದ ಯಶಸ್ಸಿಗೆ ಕಾರಣ

ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ 18-12-2014 ರಿಂದ 27-12-2014ರವರೆಗೆ ಕೂಡಲ ಸಂಗಮದಲ್ಲಿ ಏರ್ಪಡಿಸಿದ್ದ 10 ದಿನಗಳ ವಿಶೇಷ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದವರು ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರು ತರಬೇತಿ ಶಿಬಿರದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿರುವುದು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮದ ಗುಣಮಟ್ಟ ಹೆಮ್ಮೆಪಡುವ ವಿಷಯವಾಗಿದೆ.

ಪ್ರಾರಂಭದ 2-3 ತಂಡಗಳಿಗೆ ಶಿಬಿರಾರ್ಥಿಗಳನ್ನು ಕರೆತರಬೇಕಾಗಿತ್ತು. ಆದರೆ ಕಾರ್ಯಕ್ರಮದ ಗುಣಮಟ್ಟವನ್ನು ಅಧ್ಯಯನ ಮಾಡಿದ ಸಹಕಾರಿ ಸಂಸ್ಥೆಗಳು ಹಾಗೂ ಸಿಬ್ಬಂದಿಯವರು ಈ ಕಾರ್ಯಕ್ರಮ ಇನ್ನು ಯಾವಾಗ ಏರ್ಪಡಿಸುತ್ತೀರಿ ಎಂದು ಕೇಳುವ ಹಂತಕ್ಕೆ ಶಿಬಿರಾರ್ಥಿಗಳ ಸಂಖ್ಯೆ ತಾನೆ ತಾನಾಗಿ ಆಸಕ್ತಿಯಿಂದ ಬರುವುದು ಸಹಕಾರಿಗಳಲ್ಲಿ ತರಬೇತಿಯ ಬಗ್ಗೆ ಆಸಕ್ತಿಯನ್ನು ಹೆಚ್ಚಿಸಿದೆ. ಭಾಗವಹಿಸುವ ಶಿಬಿರಾರ್ಥಿಗಳ ಸಂಖ್ಯೆಯನ್ನು ಸೀಮಿತಗೊಳಿಸಿದ್ದರೂ ಸಂಖ್ಯೆ ಹೆಚ್ಚಾಗತೊಡಗಿದೆ.

ಸಂಯುಕ್ತ ಸಹಕಾರಿಯು ಏರ್ಪಡಿಸುತ್ತಿರುವ ಇಂತಹ ವಿಶೇಷ ಕಾರ್ಯಕ್ರಮಗಳಲ್ಲಿ ಇದು 12 ನೇ ತಂಡ. ಪ್ರತಿ ತಂಡವನ್ನು ಹಮ್ಮಿಕೊಳ್ಳುವ ಮೊದಲಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಸಿಬಂದಿಯವರು ಕಾರ್ಯ ಕ್ರಮಮವನ್ನು ನಡೆಸುವ ಸ್ಥಳ, ಸ್ಥಳದಲ್ಲಿ ಇರುವ ಸೌಲಭ್ಯಗಳು, ಸಾರಿಗೆ ಸಂಪರ್ಕ ವ್ಯವಸ್ಥೆ, ಕಾರ್ಯಕ್ರಮದಲ್ಲಿ ಅಳವಡಿಸುವ ವಿಷಯ, ತರಬೇತಿ ಶಿಬಿರದಲ್ಲಿ ಆಮಂತ್ರಿಸುವ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ, ಅವರ ಉಪನ್ಯಾಸದ ಅವಧಿ, ಅವರು ನೀಡುವ ಅಧ್ಯಯನ ಸಾಹಿತ್ಯ, ಶಿಬಿರಾರ್ಥಿಗಳ ತಂಡ ರಚನೆ, ಅವರುಗಳಿಗೆ ಜವಾಬ್ದಾರಿಗಳ ಹಂಚುವಿಕೆ, ಎಲ್ಲ ಶಿಬಿರಾರ್ಥಿಗಳಿಗೂ ಮಾತನಾಡುವ ಅವಕಾಶಗಳನ್ನು ವೇದಿಕೆಗಳನ್ನು ಒದಗಿಸುವುದು, ಪ್ರತಿದಿನ ಅಧ್ಯಯನ ಕಾರ್ಯಕ್ರಮಗಳು ಮುಗಿದ ನಂತರ ಅನೌಪಚಾರಿಕವಾಗಿ ಸಭೆ ನಡೆಸುವುದು, ವಿವಿಧ ಸಹಕಾರ ಸಂಘಗಳ ಪರಿಚಯ, ಹೆಚ್ಚುವರಿ ವಿಷಯವಾಗಿ ಆಧ್ಯಾತ್ಮ, ಆಹಾರ, ಆರೋಗ್ಯ, ವಿಷಯ ತಜ್ಞರೊಡನೆ ಚರ್ಚೆ, ಪತ್ರಕರ್ತರೊಡನೆ ಚರ್ಚೆ, ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಚರ್ಚೆ, ಮನರಂಜನೆ, ಪ್ರಾಯೋಗಿಕಗಳ ಅಳವಡಿಸುವಿಕೆ, ದಿನದ ಕಾರ್ಯಕ್ರಮ ಪ್ರಾರಂಭಿಸುವ ವಿಧಾನ ಪ್ರತಿ ದಿನದ ವರದಿ ಸಿದ್ಧಪಡಿಸುವ ಜವಾಬ್ದಾರಿ, ಅಧ್ಯಯನ ಪ್ರವಾಸದ ಅವಧಿಯಲ್ಲಿ ಭೇಟಿ ನೀಡಬಹುದಾದ ಸ್ಥಳಗಳ ಆಯ್ಕೆ, ಅಧ್ಯಯನ ಪ್ರವಾಸದ ವರದಿ ಪಡೆಯುವುದು, ಕೊನೆಯ ದಿನದಂದು ಶಿಬಿರಾರ್ಥಿಗಳಿಂದಲೇ ಸಮಾರೋಪ ಕಾರ್ಯಕ್ರಮ ವ್ಯವಸ್ಥೆ ಮಾಡುವುದು ಇತ್ಯಾದಿಗಳ ಬಗ್ಗೆ ಪೂರ್ಣವಾಗಿ ಚಿಂತನೆ ಮಾಡುವುದು, ರೂಢಿಸಿಕೊಂಡಿರುವುದು ಆಡಳಿತ ಮಂಡಲಿಯ ಆಸಕ್ತಿ ಹಾಗೂ ಪ್ರೋತ್ಸಾಹ ಪ್ರತಿ ತಂಡದ ಯಶಸ್ಸಿಗೆ ಕಾರಣ. ವ್ಯಕ್ತಿತ್ವ ವಿಕಾಸಕ್ಕೆ ಮೀಸಲಾಗಿರುವ ವಿಶೇಷ ತರಬೇತಿಯಾಗಬೇಕೆಂಬ ಅವರ ಕಾಳಜಿ ಹಾಗೂ ಅಪೇಕ್ಷೆ, ಗೌರವ ಯೋಗ್ಯ ಹಾಗೂ ಶ್ಲಾಘನೀಯ.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ದಿನ ಹಾಗೂ ಸ್ವಚ್ಛತಾ ಸಪ್ತಾಹ

# ಶಾಸಕ ಶ್ರೀ ಸುರೇಶ್‌ಕುಮಾರ್‌ರವರಿಂದ ಧ್ವಜಾರೋಹಣ ಹಾಗೂ ಸ್ವಚ್ಛತಾ ಸಪ್ತಾಹಕ್ಕೆ ಚಾಲನೆ







ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನದ ಆಚರಣೆಗೆ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣವನ್ನು ಮಾಡುವುದರ ಮೂಲಕ ಹಾಗೂ ಸಂಯುಕ್ತ ಸಹಕಾರಿಯ ಕಛೇರಿಯ ಆವರಣದಲ್ಲಿ ಎಲ್ಲರ ಜೊತೆಗೂಡಿ ಕಸಗುಡಿಸುವುದರ ಮೂಲಕ ಮಾಜಿ ಕಾನೂನು ಸಚಿವ, ಶಾಸಕ ಶ್ರೀ ಸುರೇಶ್ ಕುಮಾರ್ ರವರು ಸ್ವಚ್ಛತಾ ಸಪ್ತಾಹದ ಚಾಲನೆಯನ್ನು ನೀಡಿದರು.

ಧ್ವಜಾರೋಹಣ ಮಾಡಿದ ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀಯುತರು ವರ್ಷ 2014ಕ್ಕೆ ವಿದಾಯ ಹೇಳಿದ್ದೇವೆ. ಕಳೆದ ವರ್ಷದಲ್ಲಿ ಕಟ್ಟಿಕೊಂಡಿದ್ದ ಭರವಸೆಗಳನ್ನು ಸಾಕಾರ ಮಾಡಿಕೊಳ್ಳಲು ವರ್ಷ 2015ನ್ನು ಸ್ವಾಗತಿಸಿದ್ದೇವೆ. 2015 ಭರವಸೆಗಳ ಸಾಕಾರಗೊಳ್ಳುವ ವರ್ಷವಾಗಲಿ ಎಂದು ಹೇಳಿದರು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯ ಉತ್ತಮವಾಗಿದೆ. ಇದೇ ರೀತಿ ಈ ಸೌಹಾರ್ದ ಸಹಕಾರಿಗಳು ಹೆಚ್ಚು ಹೆಚ್ಚು ಕಾರ್ಯಗಳನ್ನು ಮಾಡಿ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸುವಂತಾಗಲಿ ಎಂದು ತಿಳಿಸಿದರು.

ಸ್ವಚ್ಛ ಭಾರತದ ಕನಸನ್ನು ನನಸಾಗಿಸಲು ಎಲ್ಲರೂ ಕೈಜೊಡಿಸುತ್ತಿರುವಂತೆ ಸೌಹಾರ್ದ ಸಹಕಾರಿಗಳು ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಸ್ವಾಗತಾರ್ಹ. ಈ ರೀತಿ ಸ್ವಚ್ಛ ಭಾರತ ನಿರ್ಮಾಣ ಕಾರ್ಯದಿಂದ ಮುಂಬರುವ ದಿನಗಳಲ್ಲಿ ಭಾರತ ಎಲ್ಲಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿ ಬರುವುದು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಸಹಕಾರ ಕ್ಷೇತ್ರವನ್ನು ಬಲಿಷ್ಠಗೊಳಿಸಲು ಸೌಹಾರ್ದ ಸಹಕಾರಿ ಕಾನೂನು ಒಂದು ಮಹತ್ವದ ಹೆಜ್ಜೆಯಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಹೊಸ ಸಂಚಲನವನ್ನು ಮೂಡಿಸಿದೆ. 3100 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿ ರಾಜ್ಯದಾದ್ಯಂತ ಈ ಕಾಯ್ದೆ ಜಾರಿಗೆ ಬಂದ ದಿನದ ಸಂಕೇತವಾಗಿ ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಾಗಪುರ ವಿಭಾಗದ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಪೋರೇಟರ್ ಶ್ರೀ ಹರೀಶ್ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಚ್ಛತಾ ಆಂದೋಲನಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 14 ವರ್ಷಗಳು ಕಳೆದಿವೆ 15ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿದ್ದೇವೆ. 3100ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು, 20 ಲಕ್ಷಕ್ಕೂ ಹೆಚ್ಚು ಸದಸ್ಯರ ಬಳಗ, 10,000ಕ್ಕೂ ಹೆಚ್ಚು ಠೇವಣಿಗಳು, ವಿಧವಿಧವಾದ ಚಟುವಟಿಕೆಗಳು ಅದರಲ್ಲೂ ಇ ಸ್ಟ್ಯಾಂಪಿಂಗ್ ಕ್ಷೇತ್ರದಲ್ಲಿ 700ಕ್ಕೂ ಹೆಚ್ಚು ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ 1 ಕೋಟಿಗೂ ಹೆಚ್ಚು ರಾಜಸ್ವವನ್ನು ನೀಡುತ್ತಿವೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಕಾಡಾ ಸಂಸ್ಥೆಯ ನಿರ್ದೇಶಕರಾದ ಶ್ರೀ ಮುನಿಸ್ವಾಮಿಯವರು, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ಅಧಿಕಾರಿಗಳು ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.



## ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಸ್ವಚ್ಛತಾ ಕಾರ್ಯಕ್ರಮ ಇತರರಿಗೆ ಮಾದರಿ



ರಾವಸಾಹೇಬ ಅ. ಪಾಟೀಲ

ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ

# ರಾಜ್ಯಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ

## ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



## ಜೈ ಹಿಂದ್ ಸೌಹಾರ್ದ ಪತ್ತಿನ ಸಹಕಾರಿ ನಿ., ಹುಕ್ಕೇರಿ



## ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಮತ್ತು ಸ್ವಚ್ಛತಾ ಸಪ್ತಾಹದ ಆಚರಣೆ



ಜನವರಿ 1 ರಂದು ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ, ಬೋರಗಾಂವ ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಹಿರಿಯ ಸಂಚಾಲಕರಾದ ಶ್ರೀ ಅಶೋಕ ಗಣಪತಿ ಅಮ್ಮಣ್ಣನವರಿಂದ ಸಹಕಾರಿ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಇವರ ಭಾವಚಿತ್ರಕ್ಕೆ ಪೂಜೆಯನ್ನು ಮತ್ತು ಸಹಕಾರಿ ಧ್ವಜಾರೋಹಣವನ್ನು ಉಪಾಧಕ್ಷರಾದ ಶ್ರೀ ಸುಭಾಷ ವಾಸುದೇವ ಶೆಟ್ಟಿ ಇವರು ನೆರವೇರಿಸಿದರು. "ಸ್ವಚ್ಛ ಭಾರತಕ್ಕಾಗಿ ಸಹಕಾರಿಗಳು" ಎಂಬ ಘೋಷವಾಕ್ಯದೊಂದಿಗೆ ಸ್ವಚ್ಛತಾ ಸಪ್ತಾಹದ ಆಚರಣೆಗೆ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲರವರು ಚಾಲನೆಯನ್ನು ನೀಡಿದರು. ಸಹಕಾರಿಯ ಉಪಾಧ್ಯಕ್ಷರು, ಸಂಚಾಲಕ ಮಂಡಳಿ ಸದಸ್ಯರು, ಪ್ರಧಾನ ವ್ಯವಸ್ಥಾಪಕ ಶ್ರೀ ಡಿ.ಸಿ.ಅಲಗುರೆ ಹಾಗೂ ಎಲ್ಲಾ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.



## ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು





## ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಡಿಕೇರಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ.

## ಶ್ರೀ ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ಹನುಮಸಾಗರ ಸಹಕಾರಿಯಿಂದ ಸ್ವಚ್ಛತಾ ಕಾರ್ಯ



## ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ




ದಿನಾಂಕ : 01.01.2015ರಂದು ಬೆಳಗ್ಗೆ 8.30 ಗಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಚ್. ಗಣೇಶ್ ಕಾಮತರವರು ಸಹಕಾರಿಯ ಕಛೇರಿಯಲ್ಲಿ ಸಹಕಾರಿ ಧ್ವಜಾರೋಹಣ ಮಾಡಿದರು.

ನಂತರ ಸಹಕಾರಿಯ ಎಲ್ಲಾ ನಿರ್ದೇಶಕರು, ಸಿಬ್ಬಂದಿ ವರ್ಗದವರು ಸಹಕಾರಿ ಕಛೇರಿಯ ಆವರಣದ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡರು. ಬೆಳಗ್ಗೆ 10 ಗಂಟೆಗೆ "ಸ್ವಚ್ಛ ಭಾರತಕ್ಕಾಗಿ ಸಹಕಾರಿಗಳು" ಎಂಬ ಘೋಷದೊಂದಿಗೆ ಸ್ಥಳೀಯ ಸರಸ್ವತಿ ವಿದ್ಯಾಲಯ ಪದವಿ ಪೂರ್ವ ಕಾಲೇಜು, ಸರಸ್ವತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆ, ಸರಸ್ವತಿ ವಿದ್ಯಾಲಯ ಪ್ರಾಥಮಿಕ ಶಾಲೆ ಹಾಗೂ ಸ್ಥಳೀಯ ಅಂಗನವಾಡಿ ಕೇಂದ್ರಗಳಿಗೆ ಒಟ್ಟು 50 ಕಸದ ಬುಟ್ಟಿಗಳನ್ನು ಹಸ್ತಾಂತರಿಸಲಾಯಿತು.

## ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ದೇವದುರ್ಗ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ.



## ಒಕ್ಕಲಿಗರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು



## ಕಲಬುರ್ಗಿ ವಿಭಾಗೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ





ದಿನಾಂಕ : 1.1.2015ರಂದು ಸೌಹಾರ್ದ ಸಹಕಾರಿ ದಿನದ ಅಂಗವಾಗಿ ಸಂಯುಕ್ತ ಸಹಕಾರಿಯ ಕಲಬುರ್ಗಿ ವಿಭಾಗೀಯ ಕಛೇರಿಯಲ್ಲಿ ಸಹಕಾರ ಧ್ವಜಾರೋಹಣವನ್ನು ವಿಶ್ವಕಲ್ಯಾಣ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರ್ಗಿ ಸಹಕಾರಿಯ ಅಧ್ಯಕ್ಷರೂ ಹಾಗೂ ಆಳಂದ ಕ್ಷೇತ್ರದ ಶಾಸಕರಾದ ಶ್ರೀ ಬಿ.ಆರ್.ಪಾಟೀಲರವರು ನೆರವೇರಿಸಿದರು ಸ್ವಚ್ಛ ಭಾರತಕ್ಕಾಗಿ ಸೌಹಾರ್ದ ಸಹಕಾರಿಗಳ ಸಮಿತಿ ವತಿಯಿಂದ ಸ್ವಚ್ಛತಾ ಕಾರ್ಯವನ್ನು ಮಾಡಲಾಯಿತು.

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ



ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಸಹಕಾರಿಯ ಸಲಹಾ ಸಮಿತಿ ಸದಸ್ಯರಾದ ಶ್ರೀ ಶಿವಕುಮಾರ ದೇಶಮುಖ ಅವರಿಂದ ಧ್ವಜಾರೋಹಣ.

## ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಹಾಗೂ ಶ್ರೀ ವಿಜಯಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ




ದಿನಾಂಕ 01.01.2015 ರಂದು ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಹಾಗೂ ಶ್ರೀ ವಿಜಯಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಂಯುಕ್ತ ಆಶ್ರಯದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ವಿಶ್ವನಾಥ ಹಿರೇಮಠ, ಅಧ್ಯಕ್ಷರು, ವಿಕಾಸ ಸೌಹಾರ್ದ ಬ್ಯಾಂಕ, ಹೊಸಪೇಟೆ, ಶ್ರೀ ರವೀಂದ್ರ ಆರ್ ಯಲಿಗಾರ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಪಿ ಪಿ ಯಡಳ್ಳಿ ಸಹಾಯಕ ನಿಬಂಧಕರು, ಸಹಕಾರ ಇಲಾಖೆ, ಧಾರವಾಡ, ಶ್ರೀ ವಿಜಯಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಕಾಶ ನಾಝುರೆ ಉಪಸ್ಥಿತರಿದ್ದರು. ಧಾರವಾಡ ಜಿಲ್ಲೆಯ 22 ಸೌಹಾರ್ದ ಸಹಕಾರಿ ಹಾಗೂ ಸಹಕಾರಿ ಸಂಘ ಸಂಸ್ಥೆಗಳ 94 ಪ್ರತಿನಿಧಿಗಳು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.

## ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ



ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಿ ಸಮಾಜದ ಹಿರಿಯರನ್ನು ಸನ್ಮಾನಿಸಲಾಯಿತು.



## ಉತ್ತಮ ಸಹಕಾರಿಗೆ ಸನ್ಮಾನ

ದಿ ಭಟ್ಕಳ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ಭಟ್ಕಳ ಬ್ಯಾಂಕಿನ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ಸನ್ಮಾನ ಸಮಾರಂಭದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಧನೆಗೈದ 5 ಸಾಧಕರಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಎನ್.ಪಿ.ಗಾಂವ್‌ಕರ್, ಮಾಜಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಹಾಲಿ ನಿರ್ದೇಶಕರು, ಕೆ.ಡಿ.ಸಿ.ಸಿ. ಬ್ಯಾಂಕ್, ಶಿರಸಿ ಇವರೊಂದಿಗೆ ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ ಆಪರೇಟಿವ್ ಲಿ., ಕಾರವಾರ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಾರ್ಜ್ ಫರ್ನಾಂಡಿಸ್ ಇವರನ್ನು "Best Cooperator" ಎಂದು ವಾರ್ತಾ ಸಚಿವ ಶ್ರೀ ರೋಶನ್ ಬೇಗ್‌ಅವರಿಂದ ಸನ್ಮಾನ.



## ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ

ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿನಿ., ಹಾನಗಲ್ಲ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲ್‌ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರುಗಳು, ಸಿಬ್ಬಂದಿ ವರ್ಗದವರು ಹಾಗೂ ಪತ್ರಕರ್ತರು ಉಪಸ್ಥಿತರಿದ್ದರು. ಶ್ರೀ ಎಂ.ಬಿ.ಕಲಾಲ್‌ರವರು ಸೌಹಾರ್ದ ಸಂಸ್ಥಾಪನೆಯ ವಿಚಾರಗಳನ್ನು ಹಂಚಿಕೊಂಡರು. ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಸ್ವಚ್ಛ ಅಭಿಯಾನದ ಕಾರ್ಯಕ್ರಮದಡಿಯಲ್ಲಿ ಸಹಕಾರಿಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ

**ಪುತ್ತೂರು** : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ, ವಿವೇಕ ನಗರ, ತೆಂಕಿಲ ಇಲ್ಲಿ ಸ್ವಚ್ಛತೆ ಹಾಗೂ ಆಹಾರದ ಬಳಕೆಯ ಕುರಿತು ಮಾಹಿತಿ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಸಹಕಾರಿಯ ಹಿರಿಯ ಅಧಿಕಾರಿಗಳಾದ ಶ್ರೀ ಶಿವಪ್ರಸಾದ್ ಟಿ. ಇವರು ಮಾಹಿತಿ ನೀಡಿದರು. ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಭವಾನಿ ಪ್ರಭು, ಮುಖ್ಯೋಪಾಧ್ಯಾಯರಾದ ಶ್ರೀ ಸತೀಶ್ ಕುಮಾರ್ ರೈ ಉಪಸ್ಥಿತರಿದ್ದರು.

## ಕೂಡಲಸಂಗಮದಲ್ಲಿ ವ್ಯಕ್ತಿತ್ವ ವಿಕಸನದ 12ನೇ ತಂಡದ ಕಾರ್ಯಕ್ರಮ

# ಸಹಕಾರಿಗಳಿಗೆ ಸ್ವಾಯತ್ತತೆ ನೀಡುವುದರಿಂದ ಅಭಿವೃದ್ಧಿ ಸಾಧ್ಯ - ಅಜಯಕುಮಾರ ಸರ್ ನಾಯಕ




ಸಂಯುಕ್ತ ಸಹಕಾರಿಯ ಪ್ರತಿಷ್ಠಿತ ತರಬೇತಿ ಕಾರ್ಯಕ್ರಮ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನದ ವಿಶೇಷ ತರಬೇತಿ ಕಾರ್ಯಕ್ರಮದ 12 ನೇ ತಂಡದ ತರಬೇತಿಯನ್ನು ದಿನಾಂಕ : 18-12-2014 ರಂದು ಬಾಗಲಕೋಟೆ ಜಿಲ್ಲೆಯ ಕೊಡಲಸಂಗಮದಲ್ಲಿ ಏರ್ಪಡಿಸಲಾಗಿತ್ತು.

ಮಾಜಿ ಸಚಿವ, ಮಾಜಿ ಸಂಸದ ಪ್ರಸಕ್ತ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಅಜಯಕುಮಾರ ಸರ್ ನಾಯಕರವರು ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಾ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾದಾಗಿನಿಂದ ಸಹಕಾರಿ ಕ್ಷೇತ್ರದಲ್ಲಿ ಹೊಸ ಅಲೆ ಪ್ರಾರಂಭವಾಗಿದೆ. ಸಹಕಾರಿಗಳಿಗೆ ಸ್ವಾಯತ್ತತೆಯನ್ನು ನೀಡುವುದರಿಂದ ಅಭಿವೃದ್ಧಿ ಸಾಧಿಸಬಹುದು ಎಂಬುದಕ್ಕೆ ಬೇರಾವ ಉದಾಹರಣೆಯು ಬೇಕಿಲ್ಲ ಆದ್ದರಿಂದ ಸರಕಾರಗಳು ಸಹಕಾರಿ ಕಾನೂನುಗಳನ್ನು ತಿದ್ದುಪಡಿ ಮಾಡುವಾಗ ಸಹಕಾರಿಗಳ ಸ್ವಾಯತ್ತತೆಗೆ ಹೆಚ್ಚಿನ ಆದ್ಯತೆ ನೀಡುವಲ್ಲಿ ಗಮನಹರಿಸಬೇಕು ಎಂದು ಹೇಳುವುದರೊಂದಿಗೆ ಸೌಹಾರ್ದ ಸಹಕಾರಿಗಳು ಈ ಸ್ವಾಯತ್ತತೆ ಯನ್ನು ಸ್ವೇಚ್ಛಾಚಾರವಾಗಿ ಉಪಯೋಗಿಸಬಾರದು, ಹಾಗೇನಾದರೂ ಆದಲ್ಲಿ ಈ ವ್ಯವಸ್ಥೆಗೆ ಪೆಟ್ಟುಬೀಳುತ್ತದೆ ಎಂದು ತಿಳಿಸಿದರು.

## ಸಿಬ್ಬಂದಿಗಳು ಸಹಕಾರಿಗಳ ಆಸ್ತಿಯಾಗಿ: ಗುರುನಾಥ ಜಾಂತಿಕರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ವಹಿಸಿ ಮಾತನಾಡಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನಕ್ಕಾಗಿ ಏರ್ಪಡಿಸುತ್ತಿರುವ ಇದು 12ನೇ ತಂಡವಾಗಿದೆ. ಇದುವರೆಗೆ ಭಾಗವಹಿಸಿದ ಎಲ್ಲ ಶಿಬಿರಾರ್ಥಿಗಳು ತಮ್ಮ ತಮ್ಮ ಸಹಕಾರಿ ಸಂಸ್ಥೆಗಳಿಗೆ ಉತ್ತಮ ಆಸ್ತಿಯಾಗಿ ಹೊರ ಹೊಮ್ಮಿದ್ದಾರೆ. ನೀವು ಕೊಡ ಹಾಗೆಯೇ ನಿಮ್ಮ ಸಂಸ್ಥೆಗೆ ಹೆಸರು ತರುವ ರೀತಿಯಲ್ಲಿ ತರಬೇತಿ ಪಡೆದು ಉತ್ತಮ ಕ್ರಿಯಾಶೀಲ ವ್ಯಕ್ತಿಗಳಾಗಿ ಹೊರಹೊಮ್ಮಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ನಿರ್ದೇಶಕ, ಬಾಗಲಕೋಟೆಯ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷ ಶ್ರೀ ಜಿ.ಎಸ್.ಪಾಟೀಲ್ರವರು ಮಾತನಾಡಿ ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸೌಹಾರ್ದ ಸಹಕಾರಿಗಳು ತರಬೇತಿ ಕಾರ್ಯಕ್ರಮಗಳ ಪೂರ್ಣ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಶ್ರೀ ಎಲ್. ಎಮ್.ಪಾಟೀಲರವರು ಮಾತನಾಡಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಶಿಕ್ಷಣ ಹಾಗೂ ತರಬೇತಿ ಅತ್ಯಂತ ಮಹತ್ವದ್ದು ಎಂದು ತಿಳಿಸಿದರು. ಸಹಕಾರಗಳ ಉಪನಿಬಂಧಕ ಶ್ರೀ ಎಮ್.ಪಿ.ಶೆಲ್ಲಿಕೇರಿಯವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು

# ತರಬೇತಿಯಿಂದ ವ್ಯಕ್ತಿಯ ಮಾನ್ಯತೆ ಸಂಸ್ಥೆಯ ಘನತೆ ಹೆಚ್ಚುತ್ತದೆ : ಸಮಾರೋಪ ಕಾರ್ಯಕ್ರಮದಲ್ಲಿ ಕೋಂಕೋಡಿ ಪದ್ಮನಾಭ

10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ ಸಮಾರೋಪದ ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದ ಕ್ಯಾಂಪ್ಕೋಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೋಂಕೋಡಿ ಪದ್ಮನಾಭರವರು ಉತ್ತಮ ಪರಿಸರದಲ್ಲಿ ಉತ್ತಮ ತರಬೇತಿ ಪಡೆದಿದ್ದೀರಿ. ಎಲ್ಲರಲ್ಲಿಯ ಪ್ರತಿಭೆಗಳನ್ನು ಹೊರಹಾಕುವ ಅವುಗಳಿಗೆ ಸಾಣೆ ಹಿಡಿದು ಚೂಪಾಗಿಸುವ ಕಾರ್ಯವನ್ನು ಸಂಯುಕ್ತ ಸಹಕಾರಿಯವರು ಮಾಡಿದ್ದಾರೆ. ನಿಮ್ಮ ವ್ಯಕ್ತಿತ್ವದ ಘನತೆ ಹೆಚ್ಚುವುದರ ಜೊತೆಗೆ ನಿಮ್ಮ ಸಂಸ್ಥೆಯಲ್ಲಿ ನೀವುಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದಾಗ ಸಂಸ್ಥೆಯ ತೂಕ ಹೆಚ್ಚುತ್ತದೆ. ಸೌಹಾರ್ದ ಸಹಕಾರಿ ಕಾಯ್ದೆಯ ಅನುಷ್ಠಾನಕ್ಕಾಗಿ ಹೋರಾಡುವ ಸಂದರ್ಭದಲ್ಲಿ ನಾವುಗಳೆಲ್ಲ ಕಂಡಿದ್ದ ಕನಸನ್ನು ನನಸಾಗುವ ಜವಾಬ್ದಾರಿ ಯುವ ಸಹಕಾರಿಗಳದ್ದಾಗಿದೆ. ಸಂಯುಕ್ತ ಸಹಕಾರಿಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ, ತರಬೇತಿಯಲ್ಲಿ ಉತ್ತಮ ಜ್ಞಾನವನ್ನು ನೀಡಲಾಗಿದೆ. ಜಾಗೃತಗೊಳಿಸುವ ಕಾರ್ಯ ಯಶಸ್ವಿಯಾಗಿ ನಡೆದಿದೆ ಶಿಬಿರಾರ್ಥಿಗಳು ತಮ್ಮ ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಸ್.ಆರ್.ಸತೀಶಚಂದ್ರ ಮಾತನಾಡಿ ರಾಜ್ಯದಲ್ಲಿ ಉತ್ತಮ ಯುವ ಸೌಹಾರ್ದ ಸಹಕಾರಿಗಳ ಪಡೆ ನಿರ್ಮಿಸುವ ಹೆಜ್ಜೆ ಇದಾಗಿದೆ. ಇದರಿಂದ ನೀವು ಸಂಸ್ಥೆಗಳನ್ನು ಯಶಸ್ಸಿನ ಕಡೆಗೆ ಕೊಂಡೊಯ್ಯುವುದರ ಜೊತೆಗೆ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಸಹಕಾರಿ ಆಧಾರಸ್ತಂಭದಂತೆ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.



ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಜಿ.ಎನ್. ಪಾಟೀಲರವರು ಶಿಬಿರಾರ್ಥಿಗಳಿಗೆ ಹಿತವಚನವನ್ನು ನೀಡಿ ನೀವು ಒಳ್ಳೆಯ ತರಬೇತಿಯನ್ನು ಪಡೆದಿದ್ದೀರಿ. ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಮಾತನಾಡಿ ಈ ಬಾರಿಯ ತರಬೇತಿಯಲ್ಲಿ ಶಿಬಿರಾರ್ಥಿಗಳು ಕ್ರಿಯಾಶೀಲರಾಗಿದ್ದರು. ಭಾಗವಹಿಸುವಿಕೆ ತೃಪ್ತಿದಾಯಕವಾಗಿತ್ತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಣ್ಣಸೋಗಪ್ಪ, ಶ್ರೀ ವೈ.ಟಿ.ಪಾಟೀಲ್, ಶ್ರೀ ಎಲ್.ಎಸ್.ಆನಂದ. ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯ ಶ್ರೀ ಬಿ.ಎಸ್.ಸುಲ್ತಾನಪುರಿ, ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರ, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಶ್ರೀ ಮೋಟಗಿ ಮುಂತಾದವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ ಅವರು ವಂದನಾರ್ಪಣೆ ಮಾಡಿದರು. ರಾಜ್ಯದ 24 ಜಿಲ್ಲೆಗಳ 55 ಸೌಹಾರ್ದ ಸಹಕಾರಿಗಳಿಂದ 71 ಸಿಬ್ಬಂದಿಯವರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು. ಎಲ್ಲ ಶಿಬಿರಾರ್ಥಿಗಳಿಗೆ ಗಣ್ಯರ ಮೂಲಕ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ತೃಪ್ತಿಕರವಾಗಿವೆ. ವಿಶೇಷವಾಗಿ ಬಾಗಲಕೋಟೆ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಾಚರಣೆ ಉತ್ತಮವಾಗಿದೆ. ಯಾವುದೇ ರೀತಿಯ ನೆರವು ನೀಡಲು ತಾವು ಯಾವಾಗಲೂ ಬದ್ಧ ಎಂದು ತಿಳಿಸಿದರು. ಪ್ರಾರಂಭದಲ್ಲಿ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನರವರು ಸ್ವಾಗತ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೊನೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ವೈ.ಟಿ.ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಎಸ್.ವೈ ದೊಡ್ಡಮನಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಬಾಪುಜಿ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಕರಾದ ಶ್ರೀ ಕುರ್ತಕೋಟಿ, ಪ್ರಧಾನ ವ್ಯವಸ್ಥಾಪಕ ಶ್ರೀ ಮೋಟಗಿ ಹುನಗುಂದ, ವಿಜಯ ಮಹಾಂತೇಶ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಎ.ಆರ್.ನಿಂಬಲಗುಂದಿಯವರು ಮತ್ತು ಕೆಲವು ಸಹಕಾರಿಗಳು ಭಾಗವಹಿಸಿದ್ದರು.

ಹತ್ತು ದಿನಗಳ ಅವಧಿಯ ಈ ತರಬೇತಿ ಕಾರ್ಯಕ್ರಮದಲ್ಲಿ ಹಲವಾರು ಉಪಯುಕ್ತ ವಿಷಯಗಳನ್ನು ಅಳವಡಿಸಲಾಗಿತ್ತು. ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಬೆಳಿಗ್ಗೆ ಯೋಗ ಶಿಕ್ಷಣವನ್ನು ಏರ್ಪಡಿಸಲಾಗಿತ್ತು.

ವಿವಿಧ ಸಹಕಾರಿ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸವನ್ನು ಹಾಗೂ ಪ್ರವಾಸಿ ತಾಣಗಳಾದ ಐಹೊಳೆ, ಪಟ್ಟದಕಲ್ಲು, ಮಹಾಕೋಟ, ಶಿವಯೋಗಿ ಮಂದಿರ, ಶ್ರೀ ಬನಶಂಕರಿ ದೇವಸ್ಥಾನ ಹಾಗೂ ಆಲಮಟ್ಟಿ ಜಲಾಶಯದ ಸಂಗೀತ ಕಾರಂಜಿಗಳ ವೀಕ್ಷಣೆ ಏರ್ಪಡಿಸಲಾಗಿತ್ತು. ಹಲವು ಪ್ರಾಯೋಗಿಕಗಳನ್ನು ವ್ಯವಸ್ಥೆ ಮಾಡಲಾಗಿತ್ತು.



ಪ್ರಾಯೋಗಿಕದಲ್ಲಿ



ಯೋಗ ಶಿಕ್ಷಣದಲ್ಲಿ



ಆಟದಲ್ಲಿ



ಉತ್ತಮ ಮಹಿಳಾ ಶಿಬಿರಾರ್ಥಿ



ಉತ್ತಮ ಪುರುಷ ಶಿಬಿರಾರ್ಥಿ

## ವ್ಯಕ್ತಿತ್ವ ವಿಕಸನದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದವರು

| | | | |
|---|---|---|---|
| ಉತ್ತಮ ಶಿಬಿರಾರ್ಥಿ ಪುರುಷ ವಿಭಾಗ | ಶ್ರೀ ಮಹಾಂತೇಶ ಕಾರಜೋಳ, ಬೈಲಹೊಂಗಲ | ಉತ್ತಮ ವ್ಯವಸ್ಥಾಪನಾ ತಂಡ | ಮಿನುಗು ತಾರೆ |
| ಮಹಿಳಾ ವಿಭಾಗ | ಶ್ರೀಮತಿ ಕಾವೇರಿ, ಗುಲ್ಬರ್ಗಾ | ಉತ್ತಮ ಕಾರ್ಯಕ್ರಮ ನಿರ್ವಹಣಾ ತಂಡ | ಚಾಲುಕ್ಯ |
| ದಿನದ ವರದಿ ಸಲ್ಲಿಸಿದ ತಂಡ | ತ್ರಿವೇಣಿ | ಉತ್ತಮ ಮನರಂಜನಾ ತಂಡ | ಐರಾವತ |
| ಉತ್ತಮ ಮಿಲಿ | ದಾನೇಶ, ಶಿವಮೊಗ್ಗ | ಉತ್ತಮ ಊಟೋಪಚಾರ ತಂಡ | ತ್ರಿವೇಣಿ |
| ಉತ್ತಮ ಇನ್‌ಸ್ಟಂಟ್ ಮಿಲಿ | ಬಾಣೇಶ ಪ್ರಭು, ಸಾಗರ | ಪ್ರತಿಭಾ ಪುರಸ್ಕಾರ | ಮಲ್ಲಮ್ಮ, ಕಲಬುರಗಿ |
| ಉತ್ತಮ ಸುವಿಚಾರ | ಕುಸುಮ, ಬಾಗಲಕೋಟೆ | ಸಕ್ರಿಯ ಭಾಗವಹಿಸುವಿಕೆ ವಿಶೇಷ | ಸಂಗನಗೌಡ ಮ. ಬಗಲಿ, ಜಮ್ಮಲದಿನ್ನಿ |
| ಉತ್ತಮ ಪ್ರಾರ್ಥನೆ | ಸುಪ್ರೀಯ, ಗುಲ್ಬರ್ಗಾ | ಮ್ಯುಸಿಕಲ್ ಚೇರ್ ಆಟ ವಿನ್ನರ್ | ವಿದ್ಯಾ ಅಂಗಡಿ, ಬಾಗಲಕೋಟೆ |



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರಿಗೆ ಸನ್ಮಾನ



ಬಾಗಲಕೋಟೆ ಜಿಲ್ಲೆಯ ಪ್ರತಿನಿಧಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಜಿ.ಎನ್. ಪಾಟೀಲರವರಿಗೆ ಸನ್ಮಾನ

● **ಶ್ರೀ ಗುರುರಾಜ ಜಂಬಗಿ** – "ಕಾರ್ಯಕ್ರಮ ತುಂಬಾ ಚೆನ್ನಾಗಿ ಇತ್ತು. ನಮ್ಮ ವ್ಯಕ್ತಿ ಜೀವನದಲ್ಲಿ ತುಂಬಾ ಬದಲಾವಣೆ ಸಾಧ್ಯವಾಗಿದೆ. ಸಹಕಾರದ ಬಗ್ಗೆ ನಾವು ತಿಳಿಯದ ಅನೇಕ ವಿಷಯಗಳನ್ನು ತಿಳಿದಿದ್ದೇವೆ."

● **ರೇಣುಕಾ ಎನ್. ವಜ್ಜಲ** – ಶ್ರೇಷ್ಠ ಸಹಕಾರಿಗಳ ಸಮಾಗಮ

● **ಶ್ರೀ ಶಿವಕುಮಾರ್.ಆರ್** – ವ್ಯಕ್ತಿತ್ವ ವಿಕಸನ ಕಾರ್ಯಕ್ರಮವು ಸಹಕಾರಿ ಕಾರ್ಯಚಟುವಟಿಕೆಗಳ ಭಂಡಾರವಾಗಿದೆ.

● **ಶ್ರೀ ಟಿ.ದಾನೇಶ್** – ವ್ಯಕ್ತಿತ್ವ ವಿಕಸನ ಸೌಹಾರ್ದಯುತ ವಾತಾವರಣದಲ್ಲಿ, ಕೂಡಲ ಸಂಗಮದಲ್ಲಿ ವಿಜೃಂಭಿಸಿತು.

● **ಶ್ರೀ ಶ್ರೀಧರ ಜಾಲಿಹಾಳ** – ನಮ್ಮ ವ್ಯಕ್ತಿತ್ವವನ್ನು, ಮನಸ್ಸನ್ನು ಈ ಶಿಬಿರವು ವಿಕಸನಗೊಳಿಸಿತು.

● **ಶ್ರೀ ರವಿಕುಮಾರನಾಂಪ್ಲ ಎನ್.** – ಈ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದಿಂದ ಆತ್ಮಸ್ಥೈರ್ಯ, ಆಂತರಿಕ ಸಂಬಂಧ, ಭಾಷಣ ಮಾಡುವ ಕೌಶಲ್ಯ, ಸಮಯಪಾಲನೆಗೆ ಪೂರಕವಾಗಿದೆ ಮತ್ತು ಕಾರ್ಯಕ್ರಮ ಆಯೋಜನೆ ಯಾವ ರೀತಿ ಮಾಡಬೇಕು ಎಂಬುದು ಕಲಿಕೆಗೆ ಪೂರಕ.

● **ಶ್ರೀ ವೆಂಕಟೇಶ** – ಸಹಕಾರಿಯ ಜೊತೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವುದನ್ನು ಕಲಿತಿದ್ದೇವೆ.

● **ಶ್ರೀ ಮಹೇಶ್ ಕುಮಾರ್** – ಉತ್ತಮ ವಾತಾವರಣದಲ್ಲಿ ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಸಹಕಾರಿಯ ಅಭಿವೃದ್ಧಿಗೆ ಸಹಾಯಕವಾದ ವಿಷಯವನ್ನು ತರಬೇತಿಯಿಂದ ಪಡೆದಿರುತ್ತೇನೆ.

● **ಶ್ರೀ ಮಾರುತಿ ಪಾಟೀಲ** – ವೈಯಕ್ತಿಕ ಹಾಗೂ ಸಹಕಾರಿಯ ಅಭಿವೃದ್ಧಿಗೆ ಉಪಯುಕ್ತವಾಗಿರುತ್ತದೆ.

● **ಶ್ರೀಮತಿ ವಿ.ಸಿ.ರತ್ನಮ್ಮ** – ಈ ಕಲಿಕೆಯಿಂದ ನನ್ನಲ್ಲಿನ ಸ್ಟೇಜ್ ಫಿಯರ್ ಹೋಗಿ ಇನ್ನೂ ಹೆಚ್ಚು ಹೆಚ್ಚು ಕಲಿಯಬೇಕೆಂಬಾಸೆ ಆಗಿದೆ. ಸಾಧನೆ ಮುಖ್ಯ.

● **ವಿದ್ಯಾ ಎಂ.** – Face is the index of mind ಎಂಬುದನ್ನು ನಾನು ಚೆನ್ನಾಗಿ ತಿಳಿದುಕೊಂಡೆ.

● **ಶ್ರೀ ಎಲ್.ಪಿ.ಪಾಟೀಲ್** – ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಒಂದು ಮಾದರಿ ಶಿಬಿರವಾಗಿತ್ತು. ಕಲಿಕೆಯ ಭಂಡಾರವೇ ದೊರೆಯಿತು.

● **ಶ್ರೀ ಧ್ರುವ** – ಈ ಮಾಹಿತಿಯಿಂದ ಧೈರ್ಯವಾಗಿ ಮಾತನಾಡಲು ಕಲಿತೆ.

● **ಸುರೇಖಾ ಸಜ್ಜನಶೆಟ್ಟಿ** – ತರಬೇತಿ ಕಾರ್ಯಕ್ರಮ ಸಂಘಟಿಸಲು ಉದಾಹರಣೆ ಸಂಯುಕ್ತ ಸಹಕಾರಿ ಎನ್ನಬಹುದು.

● **ಶ್ರೀ ಮಹಾಂತೇಶ ಚ. ಕಾರಜೋಳ** – "ಕಾಯಕವೇ ಕೈಲಾಸ" ಎಂಬ ಅರ್ಥವನ್ನು ಈ ಶಿಬಿರದಲ್ಲಿ ತಿಳಿದುಕೊಂಡೆ.

● **ಶ್ರೀ ಮಂಜು ಕುಲಕರ್ಣಿ** – ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದಿಂದ ನನ್ನ ವ್ಯಕ್ತಿತ್ವ ವಿಕಸನವಾಗಿದೆ

● **ಶ್ರೀ ಜಾವೇದ್ ಪಾಶ.ಬಿ.ಕೆ.** – 12ನೇ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿಯ ವಚನಗಳನ್ನು ತಿಳಿಸಿದ್ದಾರೆ. ಅದೇರೀತಿ ಸಂಪನ್ಮೂಲ ವ್ಯಕ್ತಿಗಳು ಸಹಕಾರಿಗಳಿಗೆ 21ನೇ ಶತಮಾನದಲ್ಲಿಯ ಸಹಕಾರಿ ಚಟುವಟಿಕೆಗಳ ಮಾಹಿತಿ ನೀಡಿ ಹೊಸ ಇತಿಹಾಸವನ್ನು ನಿರ್ಮಿಸಿದ್ದಾರೆ.

● **ಶ್ರೀ ನಿತಿನ್‌ಕುಮಾರ್** – ಈ 10 ದಿನಗಳಲ್ಲಿ ಕಳೆದಿರುವ ಪ್ರತಿ ಒಂದು ನಿಮಿಷವನ್ನು ನಮ್ಮ ಜೀವನದಲ್ಲಿ ಉಪಯೋಗಿಸಿಕೊಂಡರೆ, ಮುಂದಿನ ದಿನಗಳಲ್ಲಿ ಸೌಹಾರ್ದ ಸಹಕಾರಿಗಳು ಪ್ರತಿಯೊಬ್ಬರಿಗೂ ಉಪಯೋಗವಾಗುವಂತೆ ಈ ಶಿಬಿರ.

● **ಶ್ರೀ ಕೆ.ವಿ.ಲೋಕೇಶ್** – ವ್ಯಕ್ತಿತ್ವ ವಿಕಸನ ತರಬೇತಿಯು ನನ್ನ ಜೀವನಕ್ಕೆ ಪೂರಕವಾಯಿತು.

● **ಶಿಲ್ಪ** – ಸ್ಟೇಜ್ ಫಿಯರ್ ಕಡಿಮೆ ಆಗಿದೆ. Training is an opportunity to change our life and our thinking also.

● **ಶ್ರೀ ಮಹಾಂತೇಶ್ ಎಂ. ನೆಗಳೂರ** – ಸಹಕಾರಿಗಳಿಗೆ ಆಧ್ಯಾತ್ಮಿಕ, ಮಾನಸಿಕ, ವ್ಯಕ್ತಿತ್ವ ವಿಕಸನ ಸಹಕಾರಿಯ ಸಂಪೂರ್ಣ ನಿರ್ವಹಣೆಯ ತಯಾರಿ ಸಹಕಾರಿಗಳ ಪ್ರಗತಿಗೆ ಪೂರಕವಾಗಿದೆ.

● **ಶ್ರೀ ನಿರಂಜನ ಮೂರ್ತಿ ಬಿ. ಕಂಪ್ಲಿ** – ಕಲಿಯುವುದು, ಹಂಚಿಕೊಳ್ಳುವುದು, ಅಳವಡಿಸಿಕೊಳ್ಳುವುದನ್ನು ಕಲಿತೆ.

● **ಶ್ರೀ ಕರೇಗೌಡ** – ಜ್ಞಾನದ ಅಭಿವೃದ್ಧಿಗೆ ಇದೊಂದು ಸೂಕ್ತ ವೇದಿಕೆ,

● **ಶ್ರೀ ಚನ್ನಬಸಪ್ಪ ಈ.** – ವ್ಯಕ್ತಿ ನಿರ್ಮಾಣಕ್ಕೆ ಪೂರಕವಾಗಿತ್ತು.

● **ಶ್ರೀ ಕೆ.ಎಸ್. ಸಂಜಯ ಕುಮಾರ್** – Training is an Investment. ಎಂಬುದು ಸತ್ಯ.



ಅಧ್ಯಯನ ಪ್ರವಾಸದ ಅಂಗವಾಗಿ ಪಟ್ಟದಕಲ್ಲಿಗೆ ಭೇಟಿ

## ಶಿಬಿರಾರ್ಥಿಗಳ ಅನಿಸಿಕೆಗಳು

- **ಶ್ರೀ ಮಹಾರಾಜ ಸಿದ್ದು ಹಳ್ಳೂರ** – ತರಬೇತಿಯಲ್ಲಿ ಮಾಹಿತಿ ಕಣಜವೇ ತುಂಬಿತ್ತು.
- **ಶ್ರೀ ಕೆ.ಆರ್.ದಾಸಪ್ಪನವರ** – ಈ ಶಿಬಿರ ನಮಗೆ ಬೋಧಿ ವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದಂತಿತ್ತು.
- **ಕೆ.ನಾಗರತ್ನ** – ಕಣ್ಣು ಕಟ್ಟಿಕೊಂಡು ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ನಮ್ಮ ಕಣ್ಣು ತೆರೆಸಿದವು. ನಮ್ಮ ಜೀವನದಲ್ಲಿಯೂ ಹೊಸ ಸ್ಫೂರ್ತಿ ತುಂಬಿದೆ.
- **ಶ್ರೀ ಸತೀಶ್ ಎಂ. ದಾನಪ್ಪ** – ಸಹಕಾರಿಯ ಕ್ಷೇತ್ರದ ಶಿಬಿರಾರ್ಥಿಗಳಿಗೆ ದೊರೆಯುವ "ಜ್ಞಾನದ ಭಂಡಾರ"
- **ಶ್ರೀ ಗಣಪತಿ ಎನ್.** – ಸಮಯದ ಸದುಪಯೋಗದಿಂದ ಜ್ಞಾನ ಅಭಿವೃದ್ಧಿ
- **ಶ್ರೀದೇವಿ ಕಲ್ಲೂರ** – ಸ್ಟೇಜ್ ಕರೇಜ್ ಬಂದಿರುತ್ತದೆ,
- **ಶ್ರೀ ಹರೀಶ್ ಹೆಚ್.ಬಿ.** – ವ್ಯಕ್ತಿತ್ವ ವಿಕಸನ ಶಿಬಿರವು ಸಿರಿ ಇದ್ದಾಗ ಸ್ಮರಣೆ, ಕಷ್ಟದ ಸಂದರ್ಭದಲ್ಲಿ ತಾಳ್ಮೆ, ಯುದ್ಧದಲ್ಲಿ ಧೈರ್ಯ, ಹಾಗೇ ಈ ಪವಿತ್ರವಾದ ಕೂಡಲ ಸಂಗಮ ಸ್ಥಳದಲ್ಲಿ ಉತ್ತಮ ವಿಕಸನದ ಶಿಬಿರ.



- **ಶ್ರೀ ಶ್ರೀನಿವಾಸ ಮೂರ್ತಿ ಎಂ.ಎನ್.** – ಅತ್ಯುತ್ತಮ ವಾತಾವರಣದಲ್ಲಿ ವ್ಯಕ್ತಿತ್ವ ವಿಕಸನ ತರಬೇತಿ ಸಫಲತೆ.ಕಂಡಿದೆ.
- **ಮಲ್ಲವ್ವಾ** – ತಿಳಿಸಿಕೊಟ್ಟವರು ಸಹಕಾರ ಭಾಸ್ಕರ ರವೀಂದ್ರ ಚಂದ್ರಶೇಖರ ಇನ್ನಿತರು ಸ್ವತ ಕಂಡಂತಹ ಅನುಭವಗಳನ್ನು ಧಾರೆಯೆರೆದರು.
- **ಶ್ರೀ ಸಿದ್ಧನಗೌಡ ಎಸ್. ಪಾಟೀಲ್** – ಸಹಕಾರಿ ಪದದ ಅರ್ಥವಾದದ್ದು ಈ ತರಬೇತಿಯಲ್ಲಿ.
- **ಶ್ರೀ ಆನಂದ ಹೆಗಡೆ** – ತರಬೇತಿಯಿಂದ ನನಗೆ ಸಹಕಾರ ಕ್ಷೇತ್ರದ ಮೂಲಭೂತ ಕರ್ತವ್ಯ ಹಾಗೂ ಜವಾಬ್ದಾರಿ ಅರಿವಾಯಿತು
- **ಅನಿತಾ ಎನ್ ಮಾಲೀಪಾಟೀಲ್** – ನಾನು ಒಂದು ದಿನವೂ ವೇದಿಕೆ ಮೇಲ ಹೋಗಿ ಮಾತನಾಡಿರಲಿಲ್ಲ. ಇಲ್ಲಿ ಬಂದು ಸ್ಟೇಜ್ ಕರೇಜ್ ಬಂದಿದೆ.
- **ಶ್ರೀ ಕೆ.ಗುರುರಾಜ** – ನಿರ್ಮಲ ಪರಿಸರದಲ್ಲಿ ಯೋಗ, ಧ್ಯಾನ, ಪ್ರಾರ್ಥನೆ, ಪಾಠ ಕಲಿಕೆ, ಸಮಯ ಪಾಲನೆ, ಶಿಸ್ತಿನಿಂದ ಜ್ಞಾನ ಸಂಪಾದನೆ, ಪ್ರಸಾದ ಸ್ವೀಕಾರ, ಮನರಂಜನೆಯಿಂದ ಶಿಬಿರ ಎಲ್ಲಾ ವಿಷಯದಲ್ಲೂ ಉತ್ತಮವಾಗಿತ್ತು.
- **ಶ್ರೀ ಓಂಪ್ರಕಾಶ್** – ನಮ್ಮೊಳಗಿನ ಶಕ್ತಿಯ ಅರಿವಾಗಿದೆ. ಎಲ್ಲರಲ್ಲೂ ಹೊಸ ವಿಷಯ, ಜವಾಬ್ದಾರಿ ಮೂಡಿದೆ.
- **ಶ್ರೀ ಶಂಕರಗೌಡ ಎಸ್. ಪಾಟೀಲ** – ನಾನು ವೈಯಕ್ತಿಕವಾಗಿ ಬೆಳೆಯಲು ಯಶಸ್ವಿಯಾಗಲು ತುಂಬಾ ಸಹಕಾರಿಯಾಗಿದೆ.
- **ಸುಪ್ರಿಯಾ** – I got heaven from this training with a positive things.
- **ಶ್ರೀ ಬಾಣೇಶ್ ಪ್ರಭು** – ಎಲ್ಲಾ ವಿಷಯ, ವ್ಯವಸ್ಥೆ, ಊಟ ಉಪಾಹಾರ, ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗಳು ಉತ್ಕೃಷ್ಟವಾಗಿತ್ತು.
- **ಶ್ರೀ ರವಿನಾಥ್ ಕೆ.** – ಸಹಕಾರಿಗಳ ಕಾರ್ಯವೈಖರಿ ಬಗ್ಗೆ ತಿಳಿದುಕೊಳ್ಳಲು ಸಹಕಾರಿಯಾಯಿತು.
- **ಶ್ರೀ ಪಾಪಣ್ಣ ಎಸ್ ಭದ್ರಶೆಟ್ಟಿ** – ಇಲ್ಲಿ ಕಲಿತಿರುವುದು ಜೀವನದ ಬದಲಾವಣೆಗೆ ಒಳ್ಳೆಯ ಅವಕಾಶಗಳು.
- **ಶ್ರೀ ಚಂದ್ರಶೇಖರ್ ಎನ್. ಪವಾರ** – ಮಾತನಾಡುವ ಧೈರ್ಯ ಬಂದಿದೆ.
- **ರೂಪಾ ಆಲೂರ** – ಒಳ್ಳೆಯ ಶಿಕ್ಷಣ ಉತ್ತಮ ತರಬೇತಿಯಲ್ಲಿ ಒಳ್ಳೆಯ ಕಲಿಕೆ.
- **ಶ್ರೀ ಎಂ.ಎಲ್.ನಾಂಯಕ** – ಈ ರೀತಿಯ ತರಬೇತಿ ಯಾವ ಸಂಸ್ಥೆಗಳಿಂದಲೂ ಪಡೆಯಲು ಸಾಧ್ಯವಿಲ್ಲ. ಕೇವಲ ಸಂಯುಕ್ತ ಸಹಕಾರಿಯೇ ಈ ರೀತಿ ತರಬೇತಿ ನೀಡಲು ಸಮರ್ಥವಾಗಿದೆ.
- **ಕಲ್ಪನಾ ಕೆ.** – ಎಲ್ಲಾ ರೀತಿಯ ಜವಾಬ್ದಾರಿಯನ್ನು ನಿಭಾಯಿಸಬಲ್ಲೆ ಎನ್ನುವ ಆತ್ಮವಿಶ್ವಾಸವೂ ನನ್ನಲ್ಲಿ ಬಂದಿದೆ
- **ಶ್ರೀ ಸಂತೋಷ ಪಾಟೀಲ್** – ಜೀವನವನ್ನು ರೂಪಿಸಿಕೊಳ್ಳುವುದನ್ನು ತಿಳಿದುಕೊಂಡಿರುತ್ತೇವೆ.
- **ಶ್ರೀ ಬಿ.ಹೆಚ್. ಪಾಟೀಲ್** – ಸಹಕಾರಿ ತತ್ವದಲ್ಲಿ ನಂಬಿಕೆ, ಕಾರ್ಯ ನಿರ್ವಹಣೆಯಲ್ಲಿ ದಕ್ಷತೆ ಬಗ್ಗೆ ಸರಿಯಾಗಿ ತಿಳಿದುಕೊಂಡಿರುತ್ತೇನೆ.
- **ಶ್ರೀ ರಾಧಾಕೃಷ್ಣ ಕೆ.** – ವ್ಯಕ್ತಿತ್ವದ ಬಗ್ಗೆ, ಜೀವನ ಮೌಲ್ಯಗಳ ಬಗ್ಗೆ ಹಾಗೂ ಆರೋಗ್ಯದ ಬಗ್ಗೆ ನನಗೆ ಸಿಕ್ಕಿದ ಅತ್ಯಮೂಲ್ಯ ವರಪ್ರಸಾದವೇ ಈ ತರಬೇತಿ ಶಿಬಿರ.

### ಕೂಡಲಸಂಗಮದಲ್ಲಿ ಸಹಕಾರಿಗಳ ಸಂಗಮ

# ಸಹಕಾರ ಭಾರತಿ ಕರ್ನಾಟಕ ರಾಜ್ಯ ಪ್ರಥಮ ಸಮಾವೇಶ : ಯುವ ಸಹಕಾರಿಗಳಿಗೆ ಸಹಕಾರ ಸಂಸ್ಕೃತಿಯ ಸಿಂಚನ

**ಸಹಕಾರ ಭಾರತಿಯ ಕರ್ನಾಟಕ ರಾಜ್ಯದ ಪ್ರಥಮ ಸಮಾವೇಶ ದಿನಾಂಕ : 27, 28 ಡಿಸೆಂಬರ್ 2014ರಂದು ಕೂಡಲ ಸಂಗಮದಲ್ಲಿ ಏರ್ಪಡಿಸಲಾಗಿತ್ತು.**

ದಿನಾಂಕ : 27-12-2014 ರಂದು ಸಂಜೆ 5-00 ಗಂಟೆಗೆ ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆಯವರಿಂದ ಸಹಕಾರಿ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ಶ್ರೀ ಅನೀಲ ಜೋಶಿಯವರು ಅತಿಥಿಗಣ್ಯರನ್ನು ಸ್ವಾಗತಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಸಹಕಾರ ಭಾರತಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜಾಂತಿಕರರವರು ಸಹಕಾರ ಭಾರತಿ ಈ ದೇಶದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಏಕೈಕ ಸ್ವಯಂ ಸೇವಾ ಸಂಸ್ಥೆ. ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗಾಗಿ ಕಾರ್ಯನಿರ್ವಹಿಸುವುದೇ ಇದರ ಗುರಿ. ಸಹಕಾರ ಭಾರತಿ ಕೇವಲ ಕ್ರೆಡಿಟ್, ಸೌಹಾರ್ದ ಸಹಕಾರಿ ಸಂಸ್ಥೆಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸೀಮಿತವಾಗಿಲ್ಲ, ಸಹಕಾರ ಕ್ಷೇತ್ರದ ಎಲ್ಲ ಚಟುವಟಿಕೆಗಳ ಕಡೆಗೆ ಗಮನ ಹರಿಸಿದೆ. ವಿಶೇಷವಾಗಿ ಕೃಷಿ ಪತ್ತಿನ ಸಹಕಾರ ಸಂಘಗಳ ಉತ್ತಮ ಕಾರ್ಯ ನಿರ್ವಹಣೆಗೆ ಅಗತ್ಯವಾಗುವ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳುತ್ತದೆ ಎಂದು ತಿಳಿಸಿ ಸಹಕಾರ ಭಾರತಿ ಸರ್ವ ಸ್ಪರ್ಶಿ ಸರ್ವ ವ್ಯಾಪಿಯಾಗುವ ನಿಟ್ಟಿನಲ್ಲಿ ಸಹಕಾರ ಭಾರತಿ ಕಾರ್ಯನಿರ್ವಹಿಸುತ್ತಿದೆ. ವಿಶೇಷವಾಗಿ ಯುವ ಜನತೆಗೆ ಸಹಕಾರ ಸಂಸ್ಕಾರ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು. ಸಹಕಾರ ಭಾರತಿ ರಚನಾತ್ಮಕ ಆಂದೋಲನಾತ್ಮಕ, ಪ್ರತಿನಿಧಿಯಾತ್ಮಕ ಪ್ರಕಲ್ಪಾತ್ಮಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ವಿವರಿಸಿದರು.

ನಂತರ ನಡೆದ ಗೋಷ್ಠಿಯಲ್ಲಿ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸಹಕಾರ ಕ್ಷೇತ್ರದ ಸಾಧನೆ ಮತ್ತು ಸವಾಲುಗಳು ಎಂಬ ವಿಷಯ ಮಂಡನೆ ಮಾಡಿದರು.

ಶ್ರೀ ಅರವಿಂದ ದೇಶಪಾಂಡೆಯವರು ಮಾತನಾಡಿ 12ನೇ ಶತಮಾನದಲ್ಲಿಯೇ ಶ್ರೀ ಬಸವಣ್ಣನವರು ಸಹಕಾರ ಸಮಾನತೆಯ



ಬೀಜವನ್ನು ಬಿತ್ತಿ ಬೆಳೆಸಿದ ನಾಡಿನಲ್ಲಿ ಈ ಸಮಾವೇಶ ನಡೆಯುತ್ತಿರುವುದು ಸ್ವಾಗತಾರ್ಹ. ನಮ್ಮ ದೇಶದಲ್ಲಿ ಸಹಕಾರ ಅನಾದಿಕಾಲದಿಂದಲೂ ನಡೆದು ಬಂದಿದೆ. ಸಹಕಾರ ಕ್ಷೇತ್ರ ಆರ್ಥಿಕ ಸಂಘಟನೆಯಾಗಿ ಬೆಳೆದು ಬಂದಿರುವುದು ಕಳೆದ 100 ವರ್ಷಗಳಿಂದ ಮಾತ್ರ. ಸಹಕಾರ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಉತ್ತಮ ಸಹಕಾರ ಕಾರ್ಯಕರ್ತರ ಪಡೆ ಅಗತ್ಯ ಎಂದು ತಿಳಿಸಿದರು. ಈ ಕಾರ್ಯಪಡೆ ತಯಾರು ಮಾಡಿ ಉತ್ತಮ ಸಂಸ್ಕಾರ ನೀಡುವುದೇ ಈ ಸಮಾವೇಶ ಮುಖ್ಯ ಉದ್ದೇಶ ಎಂದು ತಿಳಿಸಿದರು. ಸಭೆಯಲ್ಲಿ ಸಂಸದ ಶ್ರೀ ಸಂಗಣ್ಣ ಕರಡಿಯವರು, ಶ್ರೀ ದೊಡ್ಡನಗೌಡ ಪಾಟೀಲ್, ಸಹಕಾರ ಭಾರತೀಯ ರಾಜ್ಯ ಅಧ್ಯಕ್ಷ ಶ್ರೀ ನರಸಿಂಹ ನಾಯಕರವರು ಮಾತನಾಡಿದರು. ವೇದಿಕೆಯಲ್ಲಿ ಮಾಜಿ ಸಹಕಾರ ಸಚಿವ ಶಾಸಕ ಹಾಗೂ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಲಕ್ಷ್ಮಣ ಸವದಿ, ಮಾಜಿ ಸಚಿವ, ಶಾಸಕ ಹಾಗೂ ಸಮಾವೇಶ ಸಮಿತಿಯ ಗೌರವಾಧ್ಯಕ್ಷ ಶ್ರೀ ಗೋವಿಂದ ಕಾರಜೋಳ, ಸಂಸದ ಶ್ರೀ ಕರಡಿ ಸಂಗಣ್ಣ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಪ್ರಾಂತ ಸಂಚಾಲಕ ಶ್ರೀ ಅರವಿಂದರಾವ ದೇಶಪಾಂಡೆ, ಶ್ರೀ ದೊಡ್ಡನಗೌಡ ಪಾಟೀಲ್, ಶ್ರೀ ಅರವಿಂದ ಮಂಗಳೂರು, ಶ್ರೀಮತಿ ಅರುಣಾ ಅಕ್ಕಿ, ಶ್ರೀ ಎಮ್.ಜಿ.ಪಾಟೀಲ ನಿವೃತ್ತ ಅಪರ ನಿಬಂಧಕರು, ಶ್ರೀ ಚೊಕ್ಕಬಸವನಗೌಡ, ಶ್ರೀ ಸಿ.ಎನ್.ಪರಶಿವಮೂರ್ತಿ, ನಿವೃತ್ತ ಅಪರ ನಿಬಂಧಕರು ಉಪಸ್ಥಿತರಿದ್ದರು. ಶ್ರೀಮತಿ ಅರುಣಾ ಅಕ್ಕಿಯವರು ವಂದನಾರ್ಪಣೆ ಸಲ್ಲಿಸಿದರು.

**ದಿನಾಂಕ : 18-12-2014 ರಂದು ಬೆಳಗ್ಗೆ ನಡೆದ ಉದ್ಘಾಟನಾ ಸಮಾರಂಭವು ಪರಮ ಪೂಜ್ಯ ಡಾ. ಮಹಾಂತ ಸ್ವಾಮಿಗಳು ಚಿತ್ತರಗಿ ಸಂಸ್ಥಾನ ಇವರ ದಿವ್ಯ ಸನ್ನಿಧಾನ ವೇದಘೋಶದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.**

## ಸಹಕಾರ ಸಂಸ್ಥೆಗಳು ಬಡವರ ಆಶಾಕಿರಣ, ಪ್ರಾಣ ಸಂಜೀವಿನಿ - ಗೋವಿಂದ ಕಾರಜೋಳ

ಸಮಾವೇಶ ಸಮಿತಿಯ ಗೌರವ ಅಧ್ಯಕ್ಷರಾದ ಮಾಜಿ ಸಚಿವ ಶಾಸಕ ಶ್ರೀ ಗೋವಿಂದ ಕಾರಜೋಳ ರವರು ಸ್ವಾಗತ ಮಾಡುತ್ತಾ ಸಹಕಾರ ಸಂಸ್ಥೆಗಳು ಬಡವರ ಆಶಾಕಿರಣ, ಪ್ರಾಣ ಸಂಜೀವಿನಿಯಂತಿವೆ. ಈ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಹಿಂದೆಂದಿಗಿಂತಲೂ ಈಗ ಇದೆ. ಇವುಗಳನ್ನು ಸಶಕ್ತ ಗೊಳಿಸುವುದು ಅಗತ್ಯ ಇದೆ. ಇದಕ್ಕಾಗಿ ಯುವ ಸಹಕಾರಿಗಳ ಪಡೆಯ ನಿರ್ಮಾಣಕ್ಕಾಗಿ ಸಹಕಾರಿಗಳಿಗೆ ಸಹಕಾರದ ಸಂಸ್ಕಾರ ನೀಡುವುದಕ್ಕಾಗಿ ಈ ಸಮಾವೇಶ. ಇದೊಂದು ಔಚಿತ್ಯಪೂರ್ಣ ಸಮಾವೇಶ ಎಂದು ತಿಳಿಸಿದರು.

## ಸಹಕಾರಿಗಳಿಗೆ ಸೇವಾ ಮನೋಭಾವ ಸಹಕಾರ ಸಂಸ್ಕೃತಿ ಅಗತ್ಯ, ಅವಶ್ಯಕ - ಲಕ್ಷ್ಮಣ ಸವದಿ

ಸಮಾವೇಶದ ದಿಕ್ಸೂಚಿ ಭಾಷಣ ಮಾಡಿದ ಮಾಜಿ ಸಹಕಾರ ಸಚಿವ, ಶಾಸಕ, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಲಕ್ಷ್ಮಣ ಸವದಿಯವರು ಕರ್ನಾಟಕದ ಸಹಕಾರ ಕ್ಷೇತ್ರದ ಪ್ರಗತಿಯಲ್ಲಿ ತನ್ನದೇ ಆದ ವೈಶಿಷ್ಠತೆಯನ್ನು ಹೊಂದಿದೆ. ಸಮಾಜದ ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಅಗತ್ಯವೆನಿಸುವ ವಿವಿಧ ರೀತಿಯ ಸಹಕಾರ ಸಂಸ್ಥೆಗಳನ್ನು ಕರ್ನಾಟಕ ಹೊಂದಿದೆ. ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳು ಸಮಾಜಕ್ಕೆ ಉಪಕಾರ ಮಾಡುವುದಷ್ಟೇ ಅಲ್ಲ, ಸಮಾಜದ ಸೇವೆ ಮಾಡುತ್ತಾರೆ. ಕೀರ್ತಿಗಾಗಿ ಯಾರು ಕೆಲಸ ಮಾಡಬಾರದು, ಸಮಾಜದ ಋಣ ತೀರಿಸುವುದಕ್ಕಾಗಿ ಕಾರ್ಯನಿರ್ವಹಿಸುತ್ತಾರೆ. ಸದಸ್ಯರ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಆದ್ದರಿಂದ ಇವರುಗಳ ಸೇವೆ ಸಮಾನವಾಗಿರಬೇಕು. ಎಲ್ಲರಿಗೂ ಸಮಾನ ಅವಕಾಶಗಳು ಸಿಗುವಂತೆ ನಮ್ಮ ಸಹಕಾರಿಗಳ ಸಂಸ್ಕೃತಿ ಬೆಳೆಯುವುದು ಅವಶ್ಯಕ ಸಹಕಾರಿ ಕಾರ್ಯಕರ್ತರುಗಳಲ್ಲಿ ಸಹಕಾರ ಸಂಸ್ಕೃತಿಯನ್ನು ಬೆಳೆಸುವುದು ಅಗತ್ಯವಿದೆ. ಅದಕ್ಕಾಗಿ ಈ




ಸಮಾವೇಶ ಎಂದು ತಿಳಿಸಿದರು. ಸಮಾವೇಶದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಸಹಕಾರಿಯು ಇದಕ್ಕೆ ತಮ್ಮ ಮಾರ್ಗದರ್ಶನ ಮಾಡುವುದು ಅಗತ್ಯ. ತಮ್ಮ ಸಲಹೆ ಸಹಕಾರಗಳು ಈ ಸಮಾವೇಶದ ಯಶಸ್ಸಿಗೆ ತಳಹದಿಯಾಗುತ್ತವೆ ಸಹಕಾರಿಗಳಿಗೆ ಸ್ವಾಯತ್ತತೆ ಅವಶ್ಯಕ. ರಾಜ್ಯದ ಸಹಕಾರಿ ಕಾಯ್ದೆಗಳ ತಿದ್ದುಪಡಿ ಸಂವಿಧಾನ ತಿದ್ದುಪಡಿಗೆ ಅಪಚಾರ ಮಾಡಿದಂತಾಗಿದೆ. ಈ ಬಗ್ಗೆ ಸರಕಾರ ಗಂಭೀರವಾಗಿ ಆಲೋಚಿಸಬೇಕು. ಈ ಸಮಾವೇಶದಲ್ಲಿ ನಮ್ಮ ಸಂಕಲ್ಪವಾದರೂ ಸಹಕಾರಿಗಳಿಗೆ ಸ್ವಾತಂತ್ರ, ಸ್ವಾಯತ್ತತೆ, ಮುಂದುವರೆಯಬೇಕೆಂಬುದಾಗಿದೆ ಎಂದು ತಿಳಿಸಿದರು.

ಸಮಾವೇಶದ ಪ್ರಾಸ್ತಾವಿಕ ಭಾಷಣ ಮಾಡಿದ ಸಹಕಾರ ಭಾರತಿಯ ಸಂಪರ್ಕಪ್ರಮುಖ ಶ್ರೀ ರಮೇಶ ವೈದ್ಯರವರು ಈ ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದು. ಈ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಸಹಕಾರಿಗಳಿಗೆ ಸಹಕಾರ ಸಂಸ್ಕಾರ ಅಗತ್ಯವಾಗುತ್ತದೆ. ಈ ಘನ ಉದ್ದೇಶದೊಂದಿಗೆ 35 ವರ್ಷಗಳ ಹಿಂದೆಯೇ ಪೂನಾದಲ್ಲಿ ಖ್ಯಾತ ಆರ್ಥಿಕ ತಜ್ಞ ಶ್ರೀ ಲಕ್ಷ್ಮಣರಾವ ಇನಾಮದಾರರವರು ಸಹಕಾರ ಭಾರತಿಯನ್ನು ಸ್ಥಾಪನೆ ಮಾಡಿದರು. ಸಂಸ್ಕಾರವಿಲ್ಲದೇ ಸಹಕಾರವಿಲ್ಲ ಸಹಕಾರವಿಲ್ಲದೇ ಅಭಿವೃದ್ಧಿಯಿಲ್ಲ ಎಂಬುದಾಗಿ ಹೇಳಿ ಸಹಕಾರಿ ಕಾರ್ಯಕರ್ತರುಗಳಿಗೆ ಸಂಸ್ಕಾರ ನೀಡುವುದು ಆದ್ಯತೆ ಕಾರ್ಯವಾಗಬೇಕು ಎಂದು ಅಪೇಕ್ಷಿಸಿದ್ದರು. ಅವರ ಸಂದೇಶವನ್ನು ಇವತ್ತು ಈ ಸಮಾವೇಶದ ಮೂಲಕ ತಿಳಿಯಪಡಿಸಿ ಉತ್ತಮ ಸಂಸ್ಕಾರಯುತ ಸಹಕಾರಿಗಳನ್ನು ನಿರ್ಮಾಣ ಮಾಡುವುದು, ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಚಿಂತನೆ ಮಾಡುವುದು, ಈ ಸಮಾವೇಶದ ಉದ್ದೇಶ ಎಂದು ತಿಳಿಸಿದರು. ವಿಜಯಪುರದ ಸಂಸದ ಶ್ರೀ ರಮೇಶ ಜಿಗಜಿಣಗಿಯವರು ಸ್ಮರಣ ಸಂಚಿಕೆ ಬಿಡುಗಡೆಮಾಡಿದರು.



## ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಸರ್ಕಾರ ಸ್ಪಂದಿಸುವುದು ಅಗತ್ಯ - ಜಿ.ಟಿ.ದೇವೇಗೌಡ

ಮುಖ್ಯ ಅತಿಥಿಗಳಾಗಿ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ಸಹಕಾರ ಸಚಿವ, ಶಾಸಕ ಹಾಗೂ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡರವರು ಇದೊಂದು ಉತ್ತಮ ಸಮಾವೇಶ ಎಂದರು.

ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಎಲ್ಲ ಸಹಕಾರಿಗಳಿಗೆ ಸಹಕಾರ ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳನ್ನು ತಿಳಿಸುವ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ತಿಳಿಸುವ ಸಹಕಾರಿಗಳಿಗೆ ಸಹಕಾರಿ ಸಂಸ್ಕೃತಿಯನ್ನು ಬೆಳೆಸುವ ಈ ಸಮಾವೇಶ ಅರ್ಥಪೂರ್ಣ ವಾಗಿದೆ. ವಿಶ್ವದ 90 ರಾಷ್ಟ್ರಗಳಲ್ಲಿ ಸಹಕಾರ ಚಳುವಳಿ ಕಾರ್ಯ ನಿರ್ವಹಿಸುತ್ತಿದೆ.

ಸಮಾಜದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯತ್ತ ಗಮನ ಹರಿಸುವ ಜೊತೆಗೆ ಶೋಷಣೆ ರಹಿತ ಸಮಾಜ ರಚನೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಈ ದೇಶದಲ್ಲಿ 6 ಲಕ್ಷ ಸಹಕಾರ ಸಂಸ್ಥೆಗಳಿವೆ 24 ಕೋಟಿ ಸದಸ್ಯರಿದ್ದಾರೆ. ಕರ್ನಾಟಕದಲ್ಲಿ 38000 ಸಹಕಾರ ಸಂಸ್ಥೆಗಳಿವೆ.

2.22 ಕೋಟಿ ಸದಸ್ಯರ ಬಳಗವಿದೆ. ವಿಶ್ವದಲ್ಲೇ ಬೃಹದಾಕಾರವಾಗಿ ಈ ಕ್ಷೇತ್ರ ಬೆಳೆದಿದೆ. ಜೀವನದ ಎಲ್ಲ ಚಟುವಟಿಕೆಗಳಲ್ಲೂ ಈ ಕ್ಷೇತ್ರ ತನ್ನ ಕಾರ್ಯನಿರ್ವಹಣೆಯನ್ನು ಮಾಡುತ್ತಿದೆ. ಇಂತಹ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಇರುವ ಅಡಚಣೆಗಳನ್ನು ನಿವಾರಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಹಕರಿಸಬೇಕು.

ಸಹಕಾರಿ ಬ್ಯಾಂಕುಗಳಿಗೆ, ಸಂಸ್ಥೆಗಳಿಗೆ ವಿಧಿಸುವ ತೆರಿಗೆ ಇತ್ಯಾದಿಗಳ ಪರಾಮರ್ಶೆಯಾಗುವುದು ಅವಶ್ಯಕ. ರಾಜ್ಯದ ಸಹಕಾರ ಕಾಯ್ದೆಗೆ ಮಾಡಿರುವ ತಿದ್ದುಪಡಿಗಳು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿಲ್ಲ ಈ ಬಗ್ಗೆ ಸರಕಾರ ತೀವ್ರ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ನಂತರ ಬಾಗಲಕೋಟೆಯ ಸಂಸದ ಶ್ರೀ ಪಿ.ಸಿ.ಗದ್ದಿಗೌಡರ, ಶಾಸಕ ಶ್ರೀ ವಿಜಯಾನಂದ ಕಾಶ್ಯಪ್ಪನವರು, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವ ಮುಂತಾದವರು ಮಾತನಾಡಿದರು

ಪರಮ ಪೂಜ್ಯ ಪ್ರಥಮ ಜಗದ್ಗುರು ಶ್ರೀ ಬಸವವಿಜಯ ಮೃತ್ಯುಂಜಯ ಸ್ವಾಮಿಗಳ ಆಶೀರ್ವಚನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಹಕಾರ ಚಳುವಳಿಯ ಅಭಿವೃದ್ಧಿಗೆ ಅಗತ್ಯವಿರುವ ಅನೇಕ ನಿರ್ಣಯಗಳನ್ನು ಸಮಾವೇಶದಲ್ಲಿ ಸಹಕಾರ ಭಾರತಿಯ ಸಂಘಟನಾ ಕಾರ್ಯದರ್ಶಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಸ್. ಆರ್.ಸತೀಶಚಂದ್ರರವರು ಮಂಡಿಸಿದರು. ಸರ್ವಾನುಮತದಿಂದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ■

### ನೂತನ ಪದಾಧಿಕಾರಿಗಳ ಆಯ್ಕೆ :

ಸಹಕಾರ ಭಾರತಿ ಕರ್ನಾಟಕದ ರಾಜ್ಯ ಅಧ್ಯಕ್ಷರಾಗಿ ವಿಜಯಪುರದ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಎಮ್.ಜಿ.ಪಾಟೀಲರವರನ್ನು ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಯಡಗೆರೆ ಶ್ರೀ ಸುಬ್ರಮಣ್ಯರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವರದಿ : ಸಹಕಾರ ಭಾರತಿ

## ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ 2013-14ನೇ ಸಾಲಿನ ವಾರ್ಷಿಕ ಸಭೆ ಹಾಗೂ ಅವಲೋಕನ ಸಭೆ

# ಮುಖ್ಯಕಾರ್ಯನಿರ್ವಾಹಕರು ತಮ್ಮ ತಮ್ಮ ಸಂಸ್ಥೆಗೆ ಆಧಾರಸ್ತಂಭವಾಗಿರಬೇಕು : ಗುರುನಾಥ ಜಾಂತಿಕರ

ಸಹಕಾರಿ ಸಂಸ್ಥೆಗಳಲ್ಲಿ ಮುಖ್ಯಕಾರ್ಯನಿರ್ವಾಹಕರುಗಳು ದಿನನಿತ್ಯ ವ್ಯವಹಾರದ ಕೀಲಿಕೈ ಆಗಿದ್ದು, ಜೊತೆಗೆ ತಮ್ಮದೇ ಆದ ಕೆಲವು ಶಾಸನಬದ್ಧ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದು, ಅವುಗಳ ಬಗ್ಗೆ ಸೂಕ್ತ ಜ್ಞಾನವನ್ನು ಪಡೆದುಕೊಂಡು ಕಾರ್ಯನಿರ್ವಹಿಸಿದರೆ ಮಾತ್ರ ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಆಸ್ತಿಗಳಾಗಲು ಸಾಧ್ಯ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಹಮ್ಮಿಕೊಂಡಿದ್ದ 2013–14ನೇ ಸಾಲಿನ ವಾರ್ಷಿಕ ಸಭೆ ಹಾಗೂ ಅವಲೋಕನ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ ಮುಖ್ಯಕಾರ್ಯನಿರ್ವಾಹಕರು ಶ್ರದ್ಧೆ, ದಕ್ಷತೆಯಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.



**ಬಳ್ಳಾರಿ ಜಿಲ್ಲೆ :** ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ 2013–14ನೇ ಸಾಲಿನ ವಾರ್ಷಿಕ ಸಭೆ ಹಾಗೂ ಅವಲೋಕನ ಸಭೆಯನ್ನು ದಿನಾಂಕ 11.12.2014 ರಂದು ಹೋಟೇಲ್ ಆಕಾಶ ಪ್ಯಾಲೇಸ್, ಹೊಸಪೇಟೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರವರು ಸಭೆಯನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀ ಎಲ್.ಎಸ್.ಆನಂದ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ತಿಮ್ಮಣ್ಣ, ಸಹಕಾರಗಳ ಸಹಾಯಕ ನಿಬಂಧಕರು ಆಗಮಿಸಿದ್ದರು. ಶ್ರೀ ಶ್ರೀಕಾಂತ ಬರುವೆ, ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು "2014ರ ಸೌಹಾರ್ದ ಕಾಯ್ದೆ ತಿದ್ದುಪಡಿ" ವಿಷಯದ ಬಗ್ಗೆ ಹಾಗೂ ಶ್ರೀ ಎಸ್.ತಿಮ್ಮಣ್ಣ, ಸಹಕಾರಗಳ ಸಹಾಯಕ ನಿಬಂಧಕರು, ಹೊಸಪೇಟೆ ಇವರು "ಚುನಾವಣಾ ಪೂರ್ವ ಸಿದ್ಧತೆ" ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಅವಲೋಕನ ಸಭೆಯನ್ನು ಜರುಗಿಸಿ ಸಹಕಾರಿಗಳ ಪ್ರಗತಿಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಿದರು. ಈ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯ 53 ಸಹಕಾರಿಗಳಿಂದ 80 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



### ಮುಖ್ಯಕಾರ್ಯ ನಿರ್ವಾಹಕರ ಜವಾಬ್ದಾರಿ ಮಹತ್ವದ್ದು – ಕೆ. ಸಣ್ಣ ಸೂಗಪ್ಪ

**ಕೊಪ್ಪಳ ಜಿಲ್ಲೆ :** ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ 2013–14ನೇ ಸಾಲಿನ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಹಾಗೂ ಅವಲೋಕನ ದಿನಾಂಕ : 12.12.2014 ರಂದು ಬೆಳಿಗ್ಗೆ 10.00 ಗಂಟೆಗೆ ಹೋಟೇಲ್ ಅಶೋಕ, ಗಂಗಾವತಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಸಭೆಯನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀ ಕೆ. ಸಣ್ಣಸೂಗಪ್ಪ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. "2014ರ ಸೌಹಾರ್ದ ಕಾಯ್ದೆ ತಿದ್ದುಪಡಿ ಹಾಗೂ ಚುನಾವಣಾ ಪೂರ್ವ ಸಿದ್ಧತೆ" ವಿಷಯದ ಕುರಿತು ಶ್ರೀ ಶ್ರೀಕಾಂತ ಬರುವೆ, ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು. ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಾಗೂ ಅವಲೋಕನ ಸಭೆಯನ್ನು ಜರುಗಿಸಿ ಸಹಕಾರಿಗಳ ಪ್ರಗತಿಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಿದರು. ಈ ಸಭೆಯಲ್ಲಿ ಕೊಪ್ಪಳ ಜಿಲ್ಲೆಯ ಸೌಹಾರ್ದ 80 ಸಹಕಾರಿಗಳಿಂದ 141 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು ಜಿಲ್ಲೆ :** ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ 2013-14ನೇ ಸಾಲಿನ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಹಾಗೂ ಅವಲೋಕನ ಸಭೆಯನ್ನು ದಿನಾಂಕ 12.12.2014 ರಂದು ಮಧ್ಯಾಹ್ನ 3:00 ಗಂಟೆಗೆ ಹೊಟೇಲ್ ಲಕ್ಷ್ಮೀ ರೆಸಿಡೆನ್ಸಿ, ಸಿಂಧನೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಸಭೆಯನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀಮತಿ ಮಂಜುಳಾ ಪಾಟೀಲ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಶ್ರೀ ಶ್ರೀಕಾಂತ ಬರುವೆ, ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು "2014ರ ಸೌಹಾರ್ದ ಕಾಯ್ದೆ ತಿದ್ದುಪಡಿ" ವಿಷಯದ ಬಗ್ಗೆ ಹಾಗೂ ಅತಿಥಿ ಉಪನ್ಯಾಸಕರಾದ ಶ್ರೀ ಹೆಚ್.ಡಿ. ನೇಲೋಗಲ್, ಸಹಕಾರಗಳ ಸಹಾಯಕ ನಿಬಂಧಕರು, ಸಿಂಧನೂರು ಇವರು "ಚುನಾವಣಾ ಪೂರ್ವ ಸಿದ್ಧತೆ" ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರವರು ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಾಗೂ ಅವಲೋಕನ ಸಭೆಯನ್ನು ಜರುಗಿಸಿ ಸಹಕಾರಿಗಳ ಪ್ರಗತಿಯನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಿದರು. ಈ ಸಭೆಯಲ್ಲಿ ರಾಯಚೂರು ಜಿಲ್ಲೆಯ 64 ಸೌಹಾರ್ದ ಸಹಕಾರಿಗಳಿಂದ 90 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯ ಸ್ವಾಗತವನ್ನು ಶ್ರೀ ಸಂಜಯ ಕೋರಟಕರ, ವಂದನಾರ್ಪಣೆಯನ್ನು ಶ್ರೀ ರಾಜಶೇಖರ ಹೆಚ್. ನಡೆಸಿಕೊಟ್ಟರು ಹಾಗೂ ಸಭೆಯನ್ನು ಶ್ರೀ ಅನೀಲ ಜೋಶಿ ನಿರೂಪಿಸಿದರು.

## ಬೆಳಗಾವಿ ವಿಭಾಗ : ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಅವಲೋಕನಾ ಸಭೆ ಹಾಗೂ 2014ರ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಸಭೆ ಹಾಗೂ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ಸಭೆ ಹಾಗೂ ಅವಲೋಕನಾ ಸಭೆ

**ಉತ್ತರ ಕನ್ನಡ ಜಿಲ್ಲೆ :** ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ ಹಾಗೂ 2014ರ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಸಭೆಯನ್ನು ದಿನಾಂಕ 06.12.2014 ರಂದು ಬೆಳಗ್ಗೆ 10:00 ಗಂಟೆಗೆ ಶ್ರೀಪಾದ ಹೆಗಡೆ ಕಡವೆ ಕಲ್ಯಾಣ ಮಂಟಪ, ಕೋರ್ಟ್ ರಸ್ತೆ, ಶಿರಸಿಯಲ್ಲಿ ಏರ್ಪಡಿಸಲಾಗಿತ್ತು. ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ರವರು ದೇಶದಲ್ಲಿರುವ ಸಹಕಾರಿಗಳು ಸರಕಾರ ಕೆಲಸಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿರುವುದರಿಂದ ಜನಸಾಮಾನ್ಯರಿಗೆ ಅನೂಕೂಲವಾಗಿದೆ. ಸರಕಾರ ನಡೆಸುತ್ತಿರುವ ಸೇವಾ ಚಟುವಟಿಕೆಗಳನ್ನು ಸಹಕಾರಿಗಳು ನಡೆಸುತ್ತಿರುವುದರಿಂದ ಸರಕಾರದ ಆರ್ಥಿಕ ಹೊರೆಯು ಕಡಿಮೆಯಾಗಿದೆ. ಅದಲ್ಲದೇ ಸೌಹಾರ್ದ ಚಳುವಳಿ ಪ್ರಾರಂಭದಿಂದಾಗಿ ಸಹಕಾರ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ಬಲ ಬಂದಂತಾಗಿದೆ. ಅಲ್ಲದೇ ಸಹಕಾರ ಚಳುವಳಿಯಲ್ಲಿ ಯುವಕರ ಪ್ರವೇಶದಿಂದಾಗಿ ವಿಶಿಷ್ಟವಾದ, ಸರಳವಾದ ಸೇವೆಗಳನ್ನು ನೀಡಲು ಸಾಧ್ಯವಾಗುತ್ತಿದೆ ಎಂದರು. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಚಳುವಳಿಯಿಂದಾಗಿ ಸರಕಾರವು ನಿರ್ವಹಿಸುವ ಕಾರ್ಯದ ಹೊರೆ ಕಡಿಮೆ ಮಾಡಲಾಗುತ್ತಿದೆ ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ವಹಿಸಿದ್ದರು. ಸಭೆಯಲ್ಲಿ ಸಹಕಾರ



ಸಂಘಗಳ ಉಪ ನಿಬಂಧಕರಾದ ಶ್ರೀ ಬಿ.ಎಸ್. ಜವರೇಗೌಡ ಹಾಗೂ ಸಹಾಯಕ ನಿಬಂಧಕರಾದ ಶ್ರೀ ಕೆ.ಎಸ್. ಸಿದ್ದಾರ್ಥ ಉಪಸ್ಥಿತರಿದ್ದರು.

ಸಭೆಯ ಸ್ವಾಗತ ಮತ್ತು ಪ್ರಾಸ್ತವಿಕವನ್ನು ಶ್ರೀ ಸೂರ್ಯಕಾಂತ ರ್‍ಯಾಕಲೆ ಹಾಗೂ ವಂದನಾರ್ಪಣೆಯನ್ನು ಶ್ರೀ ಮನೋಹರ ಎಮ್.ಎನ್. ಸಲ್ಲಿಸಿದರು. ನಿರೂಪಣೆಯನ್ನು ಶ್ರೀ ಶಿವಕುಮಾರ ಬಿರಾದಾರವರು ನಡೆಸಿಕೊಟ್ಟರು. ಸದರಿ ಅವಧಿಯಲ್ಲಿ 2014ರ ವರೆಗಿನ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಕುರಿತು ಚರ್ಚೆ ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳ ಬಗ್ಗೆ ಅವಲೋಕನ ನಡೆಸಲಾಯಿತು. ಈ ಸಭೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ 38 ಸೌಹಾರ್ದ ಸಹಕಾರಿಗಳಿಂದ 51 ಪ್ರತಿನಿಧಿಗಳು ಹಾಜರಿದ್ದರು.

# ಮುಖ್ಯಕಾರ್ಯ ನಿರ್ವಾಹಕರಿಗೆ ಕಾನೂನಿನ ಅರಿವು ಅಗತ್ಯ : ಕಲ್ಲಪ್ಪ ಓಬಣ್ಣ ಗೋಳ್, ಉಪ ನಿಬಂಧಕರು, ಬೆಳಗಾವಿ





**ಬೆಳಗಾವಿ ಜಿಲ್ಲೆ :** ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ಸಭೆ ಹಾಗೂ ಅವಲೋಕನಾ ಸಭೆಯನ್ನು ದಿನಾಂಕ : 19.12.2014ರಂದು ಬೆಳಗ್ಗೆ 10.00 ಗಂಟೆಗೆ ಕುಮಾರ ಗಂಧರ್ವ ರಂಗ ಮಂದಿರ, ಹಳೆ ಪಿ ಬಿ ರಸ್ತೆ, ಬೆಳಗಾವಿಯಲ್ಲಿ ಏರ್ಪಡಿಸಲಾಗಿತ್ತು. ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಸಹಕಾರಿ ಸಂಸ್ಥೆಗಳು ಸ್ವಾಯತ್ತತೆ, ಸದಸ್ಯರ ಸ್ವಯಂ ನಿಯಂತ್ರಣ, ಸ್ವಯಂ ಆಡಳಿತ ತತ್ವಗಳ ಮೇಲೆ ಹುಟ್ಟಿ ಸರ್ಕಾರದ ಯಾವುದೇ ಕಪಿಮುಷ್ಠಿಯ ನಿಯಂತ್ರಣವಿಲ್ಲದೇ ಬೆಳೆಯಬೇಕೆಂಬ ಮಹದಾಸೆಯಿಂದ ಸೌಹಾರ್ದ ಸಹಕಾರಿ ಕಾಯ್ದೆ ಕರ್ನಾಟಕದಲ್ಲಿ 2001ರಂದು ಜಾರಿಗೆ ಬಂದಿದ್ದು, ಕಳೆದ 13 ವರ್ಷಗಳಲ್ಲಿ ಬಹಳಷ್ಟು ಸೌಹಾರ್ದ ಸಹಕಾರಿಗಳು ಜನ್ಮ ತಾಳಿ ಉತ್ತಮ ಸೇವೆ ಸಲ್ಲಿಸುತ್ತಿವೆ. ಅವುಗಳ ಪ್ರಗತಿ ನಿಜವಾಗಿ ಮೆಚ್ಚುವಂತಹುದು.

ಕರ್ನಾಟಕದಲ್ಲಿ ಕೆಲವು ಸೌಹಾರ್ದ ಸಹಕಾರಿಗಳು ರೂ. 600 ರಿಂದ ರೂ. 700 ಕೋಟಿಗಳವರೆಗೆ ಠೇವುಗಳನ್ನು ಹೊಂದಿವೆ ಎಂದು ತಿಳಿಸಿದರು. ಮುಖ್ಯಕಾರ್ಯನಿರ್ವಾಹಕರು ಸಂಸ್ಥೆಯ ಬೆಳವಣಿಗೆಗೆ ಇನ್ನೂ ಶ್ರಮಿಸಬೇಕಾಗಿದೆ, ಪ್ರತಿಯೊಂದು ಕಾನೂನು ಉಪನಿಯಮಗಳನ್ನು ತತ್ವಶಃ ಪಾಲಿಸಬೇಕಾಗಿದ್ದು, ಸಂಸ್ಥೆಯ ಆಡಳಿತದ ಹೆಚ್ಚಿನ ಜವಾಬ್ದಾರಿಯನ್ನು ಅವರು ಹೊರಬೇಕಾಗಿರುತ್ತದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಿವಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ್ ಸುಲ್ತಾನಪೂರೆರವರು ಮಾತನಾಡುತ್ತ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹೆಚ್ಚಿನ ಕಾನೂನು ಅರಿವನ್ನು ಹೊಂದಬೇಕಾಗಿದೆ ಎಂದು ಹೇಳಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಾದ ಶ್ರೀ ಜಯಾನಂದ ಜಾಧವರವರು ವಹಿಸಿದ್ದರು. ಸಭೆಯಲ್ಲಿ ಬೆಳಗಾವಿ ಜಿಲ್ಲೆಯ ಸಹಕಾರಿಗಳ ಉಪನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೋಳರವರು ಸಹಕಾರಿಗಳ "ಚುನಾವಣಾ ಪೂರ್ವ ಸಿದ್ಧತೆ" ವಿಷಯದ ಬಗ್ಗೆ ಹಾಗೂ ಬೆಳಗಾವಿ ಜಿಲ್ಲೆಯ ಸಹಕಾರಿಗಳ ಲೆಕ್ಕಪರಿಶೋಧನಾ ಇಲಾಖೆ ಉಪನಿರ್ದೇಶಕರಾದ ಶ್ರೀ ಬಿ ಸುರೇಶರಾವ್ ರವರು "ಲೆಕ್ಕಪರಿಶೋಧನೆಯಲ್ಲಿ ಸಹಕಾರಿಗಳು ಕೈಕೊಳ್ಳುವ ಕ್ರಮಗಳ" ಕುರಿತು ಉಪನ್ಯಾಸವನ್ನು ನೀಡಿದರು. ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥರವರು "ಸಹಕಾರಿ ಸಂಸ್ಥೆಗಳಿಗೆ ಅನ್ವಯಿಸುವ ಆದಾಯ ತೆರಿಗೆ ಕಾನೂನು, ಇತರ ಕಾನೂನುಗಳ" ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು. ಬೆಳಗಾವಿ ವಿಭಾಗೀಯ ಅಧಿಕಾರಿ ಶ್ರೀ ಜಿ ಎಸ್ ಟೋಪಣ್ಣವರ ರವರು "2014ರ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ" ಕುರಿತು ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ. ಕುಮಾರವರು ಅವಲೋಕನಾ ಸಭೆಯನ್ನು ನಡೆಸಿಕೊಟ್ಟರು.

ಸಭೆಯ ಸ್ವಾಗತವನ್ನು ಬೆಳಗಾವಿ ವಿಭಾಗೀಯ ಅಧಿಕಾರಿ ಶ್ರೀ ಜಿ ಎಸ್ ಟೋಪಣ್ಣವರ, ಪ್ರಾಸ್ತಾವಿಕ ಹಾಗೂ ವಂದನಾರ್ಪಣೆಯನ್ನು ಶ್ರೀ ವೈ ಕುಮಾರ ರವರು ನಡೆಸಿಕೊಟ್ಟರು. ನಿರೂಪಣೆಯನ್ನು ಶ್ರೀ ಬಸವರಾಜ ಹೊಂಗಲ ನಡೆಸಿಕೊಟ್ಟರು. ಈ ಸಭೆಯಲ್ಲಿ ಬೆಳಗಾವಿ ಜಿಲ್ಲೆಯ 375 ಸೌಹಾರ್ದ ಸಹಕಾರಿಗಳಿಂದ 475 ಪ್ರತಿನಿಧಿಗಳು ಹಾಜರಿದ್ದರು. ■

## ತರಬೇತಿಗಳ ಸಂಯೋಜನೆಗಾಗಿ ಸದಸ್ಯ ಸಹಕಾರಿಗಳ ಅಭಿಪ್ರಾಯ ಕಳುಹಿಸುವ ಕುರಿತು

ಸಂಯುಕ್ತ ಸಹಕಾರಿಯು ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಲಿರುವ ತರಬೇತಿ ಕಾರ್ಯಕ್ರಮಗಳ ಬಗ್ಗೆ ಸದಸ್ಯ ಸಹಕಾರಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ವಾರ್ಷಿಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ. ಈ ಬಗ್ಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮಗೆ ಅಗತ್ಯವಿರುವ ತರಬೇತಿ ವಿಷಯಗಳ ಬಗ್ಗೆ ಲಿಖಿತ ರೂಪದಲ್ಲಿ ಸಂಯುಕ್ತ ಸಹಕಾರಿಗೆ ದಿನಾಂಕ : 31.01.2015ರ ಒಳಗಾಗಿ ಕಳುಹಿಸಲು ಕೋರಿದೆ.

# ಸೌಹಾರ್ದ ಸಹಕಾರಿ ಕ್ಷೇತ್ರ ಬಲಾಢ್ಯವಾಗಿ ಬೆಳೆಯುತ್ತಿದೆ - ಅರುಣ್ ಶಹಾಪುರ



ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಭೆ ಹಾಗೂ ಅವಲೋಕನ ಸಭೆಯನ್ನು ದಿನಾಂಕ 26.12.2014 ರಂದು ವಿಜಯಪುರ ಕಲಾಭವನದಲ್ಲಿ ಏರ್ಪಡಿಸಲಾಗಿತ್ತು. ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ರವರು ಸಹಕಾರಿಗಳಲ್ಲಿ ಮುಖ್ಯಕಾರ್ಯನಿರ್ವಾಹಕರು ಹಾಗೂ ನೌಕರರು ಉತ್ತಮ ತೃಪ್ತಿಕರ ಸೇವೆಗಳನ್ನು ಇನ್ನೂ ಹೆಚ್ಚಿಗೆ ಕೊಟ್ಟಲ್ಲಿ ಈ ಸಂಸ್ಥೆಗಳ ವ್ಯವಹಾರಗಳು ಅಲ್ಪಾವಧಿಯಲ್ಲಿ ದುಪ್ಪಟ್ಟು ಆಗುವಲ್ಲಿ ಸಂದೇಹವಿಲ್ಲ ಎಂದು ಅಭಿಪ್ರಾಯಪಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸದಸ್ಯರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಅರುಣ ಶಹಾಪೂರ ರವರು ಸೌಹಾರ್ದ ಸಹಕಾರಿಯು ಕರ್ನಾಟಕದಲ್ಲಿ ಬಲಾಢ್ಯವಾಗಿದ್ದು, ಸಹಕಾರ ಸಂಸ್ಥೆಗಳ ವ್ಯವಹಾರಗಳಲ್ಲಿ ಪೈಪೋಟಿ ನಿರ್ಮಾಣ ಮಾಡಿದ್ದು, ಇದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಹಕಾರಿ ಇಲಾಖೆಯಲ್ಲಿ ಹೆಚ್ಚುವರಿ ಅಪರ ನಿಬಂಧಕರು (ನಿವೃತ್ತ) ಶ್ರೀ ಎಂ.ಜಿ.ಪಾಟೀಲರವರು ಮಾತನಾಡುತ್ತಾ ಸೌಹಾರ್ದ ಸಂಸ್ಥೆಗಳು ಸ್ವಾಯತ್ತವಾಗಿಯೂ, ಸಕ್ರಿಯವಾಗಿಯೂ ಕಾರ್ಯನಿರ್ವಹಿಸುತ್ತಿದ್ದು, ಸಹಕಾರಿಗಳು ವ್ಯವಹಾರಗಳಲ್ಲಿ ಹೆಚ್ಚಿನ ಶಿಸ್ತು ಹಾಗೂ ಬದ್ಧತೆಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಳವಡಿಕೊಂಡರೆ ಇವುಗಳು ಇನ್ನಷ್ಟು ಹೆಚ್ಚಿನ ಸಮಾಜ ಸೇವೆ ಮಾಡಲು ಸಾಧ್ಯವಾಗುತ್ತದೆ, ನುರಿತ ಅಧಿಕಾರಿಗಳ ಸೇವೆ ಸಲಹೆಗಳನ್ನು ಈ ಸಂಸ್ಥೆಗಳು ಪಡೆದು ತಮ್ಮ ಕಾರ್ಯಪದ್ಧತಿಯಲ್ಲಿ ಹೆಚ್ಚಿನ ಚೈತನ್ಯ ಬೆಳೆಸಿಕೊಳ್ಳಬಹುದು ಎಂದು ಹೇಳಿದರು.

ಸಭೆಯ ಸ್ವಾಗತವನ್ನು ಶ್ರೀ ಜಿ.ಎಸ್. ಟೋಪ್ಪಣ್ಣವರ, ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲರವರು ನಡೆಸಿಕೊಟ್ಟರು. ವಿಜಯಪುರ ಜಿಲ್ಲೆಯ ಸಹಕಾರಿಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಎಸ್. ಆರ್. ನಾಯಕರವರು "ಚುನಾವಣೆ ಪೂರ್ವ ಸಿದ್ಧತೆ" ವಿಷಯದ ಬಗ್ಗೆ ಹಾಗೂ ಲೆಕ್ಕಪರಿಶೋಧನಾ ಇಲಾಖೆಯ ಹಿರಿಯ ನಿರೀಕ್ಷಕರಾದ ಶ್ರೀ ವಿ.ಪಿ.ನಾಯಿಕರವರು "ಸಹಕಾರಿಗಳಲ್ಲಿ ಲೆಕ್ಕಪರಿಶೋಧನೆ ಹಾಗೂ ಜವಾಬ್ದಾರಿಗಳು" ವಿಷಯದ ಬಗ್ಗೆ ಮಾಹಿತಿಗಳನ್ನು ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ರವರು ಅವಲೋಕನ ಸಭೆಯನ್ನು ಮತ್ತು ಮಧ್ಯಾಹ್ನ ವಿಜಯಪುರದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಶರಣಗೌಡ ಬಿ. ಪಾಟೀಲರವರು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ಕಾಯಿದೆ ಹಾಗೂ ವಿವಿಧ ಇತರ ಕಾನೂನುಗಳ ಬಗ್ಗೆ ಉಪನ್ಯಾಸ ನೀಡಿದರು. ಸಭೆಯನ್ನು ಶ್ರೀ ಬಸವರಾಜ ಹೊಂಗಲರು ನಿರೂಪಿಸಿದರು.

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಸಹಕಾರಿಯ ಶಾಖೆಯು ದೊಡ್ಡಬಳ್ಳಾಪುರದಲ್ಲಿ ಪ್ರಾರಂಭ



ದೊಡ್ಡಬಳ್ಳಾಪುರದ ತಾಲ್ಲೂಕು ಆಫೀಸ್ ರಸ್ತೆಯಲ್ಲಿ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಸಹಕಾರಿಯ ಶಾಖೆಯು ದಿನಾಂಕ 18.12.2014ರಂದು ಮಾಜಿ ಶಾಸಕರಾದ ಶ್ರೀ ಜೆ.ನರಸಿಂಹಸ್ವಾಮಿರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ದೊಡ್ಡಬಳ್ಳಾಪುರ ನಗರದ ಬಿಜೆಪಿ ಮುಖಂಡರಾದ ಶ್ರೀ ಕೆ.ಎಂ.ಹನುಮಂತರಾಯಪ್ಪ, ಬಿಜೆಪಿ ಮುಖಂಡರಾದ ಜಿಲ್ಲಾ ಅಧ್ಯಕ್ಷರಾದ ಶ್ರೀ ಬಿ.ಸಿ.ನಾರಾಯಣಸ್ವಾಮಿ ಮತ್ತು ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿಯ 2015ರ ಹೊಸ ವರ್ಷದ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಲಾಯಿತು.

# Guidelines for Licensing of Small Finance Banks in the Private Sector

Compiled by : **K.Vittal Shetty,** DJ&PR, CAIIB, DBM (IIB), MBM (Former Chief General Manager & CEO of SUCO BANK)

(ಹಿಂದಿನ ಸಂಚಿಕೆಯಿಂದ)

**6. Promoter's contribution**

The promoter's minimum initial contribution to the paid-up equity capital of such small finance bank shall at least be 40 per cent. If the initial shareholding by promoter in the bank is in excess of 40 per cent, it should be brought down to 40 per cent within a period of five years. The promoter's minimum contribution of 40 per cent of paid-up equity capital shall be locked in for a period of five years from the date of commencement of business of the bank. Further, the promoter's stake should be brought down to 30 per cent of the paid-up equity capital of the bank within a period of 10 years, and to 26 per cent within 12 years from the date of commencement of business of the bank. Proposals having diversified shareholding subject to the initial minimum shareholding of promoters and a time frame for listing of the bank will be preferred. However, after the small finance bank reaches the net worth of Rs.500 crore, listing will be mandatory within three years of reaching that net worth. However, small finance banks having net worth of below Rs.500 crore could also get their shares listed voluntarily, subject to fulfillment of the requirements of the capital markets regulator.

**7. Foreign shareholding**

The foreign shareholding in the small finance bank would be as per the Foreign Direct Investment (FDI) policy for private sector banks as amended from time to time. As per the current FDI policy, the aggregate foreign investment in a private sector bank from all sources will be allowed up to a maximum of 74 per cent of the paid-up capital of the bank (automatic up to 49 per cent and approval route beyond 49 per cent to 74 per cent). At all times, at least 26 per cent of the paid-up capital will have to be held by residents. In the case of Foreign Institutional Investors (FIIs) / Foreign Portfolio Investors (FPIs), individual FII / FPI holding is restricted to below 10 per cent of the total paid-up capital, aggregate limit for all FIIs /FPIs / Qualified Foreign Investors (QFIs) cannot exceed 24 per cent of the total paid-up capital, which can be raised to 49 per cent of the total paid-up capital by the bank concerned through a resolution by its Board of Directors followed by a special resolution to that effect by its General Body. In the case of NRIs, the individual holding is restricted to 5 per cent of the total paid-up capital both on repatriation and non-repatriation basis and aggregate limit cannot exceed 10 per cent of the total paid-up capital both on repatriation and non-repatriation basis. However, Non-Resident Indian (NRI) holding can be allowed up to 24 per cent of the total paid-up capital both on repatriation and non-repatriation basis provided the banking company passes a special resolution to that effect in the General Body.

**8. Voting rights and transfer/acquisition of shares**

As per Section 12 (2) of the Banking Regulation Act, 1949, any shareholder's voting rights in private sector banks are capped at 10 per cent. This limit can be raised to 26 per cent in a phased manner by the RBI.

**9. Prudential norms**

The newly set up small finance banks should ensure that they put in place a robust risk management framework. The small finance bank will be subject to all prudential norms and regulations of RBI as applicable to existing commercial banks including requirement of maintenance of CRR and SLR. No forbearance would be provided for complying with the statutory provisions.

In view of the objective for which small finance bank will be set up, it will be required to extend 75 per cent of its Adjusted Net Bank Credit (ANBC) to the sectors eligible for classification as priority sector lending (PSL) by RBI. While 40 per cent of its ANBC should be allocated to different sub-sectors under PSL as per the extant PSL prescriptions, the bank can allocate the balance 35 per cent to any one or more sub-sectors under the PSL where it has competitive advantage.

The maximum loan size and investment limit exposure to a single and group obligor would be restricted to 10 per cent and 15 per cent of its capital funds, respectively. Further, in order to ensure that the bank extends loans primarily to small borrowers, at least 50 per cent of its loan portfolio should constitute loans and advances of up to Rs.25 lakh.

In addition to the restrictions placed on banks' loans and advances to its directors and the companies in which its directors are interested under Section 20 of the Banking Regulation Act, 1949, the small finance bank is precluded from having any exposure to its promoters, major shareholders, the relatives of the promoters as also the entities in which they have significant influence or control.

**10. Additional conditions for NBFCs/MFIs/LABs converting into a bank**

An existing NBFC/MFI/LAB, if it meets the conditions under these guidelines, could apply to convert itself into a small finance bank, after complying with all legal and approval requirements from various authorities. In such a

case, the entity shall have a minimum net worth of Rs. 100 crore or it shall infuse additional paid-up equity capital to achieve net worth of Rs. 100 crore. It may be noted that on conversion into a small finance bank, the NBFC / MFI will cease to exist and all its business which a bank can undertake should fold into the bank and the activities which a bank cannot statutorily undertake be divested / disposed of. Further, the branches of the NBFC / MFI should either be converted into bank branches or be merged / closed as per the business plan. The small finance bank and the NBFC / MFI cannot co-exist.

Banks are precluded from creating floating charge on their assets. For such NBFCs / MFIs, which succeed in obtaining licences to convert into small finance banks, if they have created floating charges on their assets for secured borrowings which stand in their balance sheets on the day of conversion into a bank, RBI will permit grandfathering of such borrowings till their maturity, subject to imposition of additional capital charge in order to protect the interest of the depositors.

If the existing NBFCs / MFIs / LABs have diluted the promoters' shareholding to below 40 per cent, but above 26 per cent, due to regulatory requirements or otherwise, RBI may not insist on the promoters' minimum initial contribution as indicated in paragraph 6 of the guidelines.

### 11. Business plan

The applicants for small finance bank licences will be required to furnish their business plans along with project reports with their applications. The business plan will have to address how the bank proposes to achieve the objectives behind setting up of small finance banks and in the case of an NBFC / MFI applicant, how the existing business of NBFC / MFI will fold into the bank or divested / disposed of. The business plan submitted by the applicant should be realistic and viable. In case of deviation from the stated business plan after issue of licence, RBI may consider restricting the bank's expansion, effecting change in management and imposing other penal measures as may be necessary.

### 12. Corporate governance

i. The Board of the small finance bank should have a majority of independent Directors.

ii. The bank should comply with the corporate governance guidelines including 'fit and proper' criteria for Directors as issued by RBI from time to time.

### 13. Other conditions

i. If a promoter setting up a small finance bank desires to set up a Payments Bank, it should set up both types of banks under a Non-Operative Financial Holding Company (NOFHC) structure. However, a promoter will not be granted licences for both universal bank and small finance bank even if the proposal is to set them up under the NOFHC structure.

ii. Individuals (including relatives) and entities other than the promoters will not be permitted to have shareholding in excess of 10 per cent of the paid-up equity capital of the bank. In case of existing NBFCs / MFIs / LABs converting into small finance bank, where there is shareholding in excess of 10 per cent of the paid-up equity capital by entities other than the promoters, RBI may consider providing time upto 3 years for the shareholding to be brought down to 10 per cent.

iii. The small finance bank cannot be a Business Correspondent (BC) for another bank. However, it can have its own BC network.

iv. The operations of the bank should be technology driven from the beginning, conforming to generally accepted standards and norms; while new approaches (such as for data storage, security and real time data updation) are encouraged, a detailed technology plan for the same should be furnished to RBI.

v. The bank should have a high powered Customer Grievances Cell to handle customer complaints. The small finance banks will come under the purview of RBI's Banking Ombudsman Scheme, 2006.

vi. The compliance of terms and conditions laid down by RBI is an essential condition of grant of licence. Any non-compliance will attract penal measures including cancellation of licence of the bank.

(ಮುಂದಿನ ಸಂಚಿಕೆಗೆ...)



**The newly set up small finance banks should ensure that they put in place a robust risk management framework. The small finance bank will be subject to all prudential norms and regulations of RBI as applicable to existing commercial banks including requirement of maintenance of CRR and SLR. No forbearance would be provided for complying with the statutory provisions.**

## ಸೌಹಾರ್ದ ಸಹಕಾರಿಗಳ ಎ.ಸಿ.ಸಿ. ನಿರ್ವಹಣೆಗಾಗಿ

# ಇ – ಸ್ಟಾಂಪಿಂಗ್ ಕೇಂದ್ರಗಳಿಗೆ ಮಾರ್ಗದರ್ಶಿ

**ಇ ಸ್ಟಾಂಪಿಂಗ್ ಕಾರ್ಯನಿರ್ವಹಿಸುತ್ತಿರುವ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಎ.ಸಿ.ಸಿ. ಕೇಂದ್ರಗಳನ್ನು ನಿರ್ವಹಿಸುವ ಎಲ್ಲ ಸಿಬ್ಬಂದಿಗಳು ಯಾವುದೇ ರೀತಿಯ ನ್ಯೂನ್ಯತೆಗಳಿಲ್ಲದಂತೆ ಕಾರ್ಯನಿರ್ವಹಿಸುವಂತಾಗಲು ಮಾರ್ಗದರ್ಶಿಯನ್ನು ಸಿದ್ಧಪಡಿಸಲಾಗಿದೆ. ಇದನ್ನು ಅನುಸರಿಸಿ ಎಲ್ಲ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸಲು ಸೂಚಿಸಿದೆ.**

1. ಇ–ಸ್ಟಾಂಪಿಂಗ್ ಮುದ್ರಣಕ್ಕೆ ಸಂಬಂಧಿಸಿದಂತೆ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿ., (Stock Holding Corporation of India Ltd.) ರವರು ಅನುಮೋದಿಸಿರುವ ಎಚ್‌ಪಿ 2055ಡಿ ಅಥವಾ ಎಂ401ಡಿ ಪ್ರಿಂಟರ್‌ಗಳನ್ನು ಬಳಸಬೇಕು.
2. ಎಲ್ಲ ಎಸಿಸಿ ಕೇಂದ್ರಗಳು ಒರಿಜಿನಲ್ ಪ್ರಿಂಟರ್ ಕಾಟ್ರೇಜ್‌ನ್ನೇ ಉಪಯೋಗಿಸತಕ್ಕದ್ದು. ಒರಿಜಿನಲ್ ಪ್ರಿಂಟರ್ ಕಾಟ್ರೇಜ್‌ನ್ನು ಉಪಯೋಗಿಸದಿದ್ದಲ್ಲಿ ಆ ಎಸಿಸಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಕಾಟ್ರೇಜ್‌ನ ಬೆಲೆ ಹಾಗೂ ಹೆಸರನ್ನು ಈ ಕೆಳಗೆ ತಿಳಿಸಲಾಗಿದೆ. ಹಾಗೂ ಖರೀದಿಸಿದ ಸೌಹಾರ್ದ ಸಹಕಾರಿಗಳಿಗೆ ಕಾಟ್ರೇಜ್‌ನ್ನು ಪ್ರತಿ ತಿಂಗಳ ಮೊದಲ ವಾರದಂದು ಹೆಚ್ ಪಿ ಕಂಪನಿಯವರು ವಿಲೇವಾರಿ ಮಾಡುತ್ತಾರೆ. ಕಾಟ್ರೇಜ್‌ನ್ನು ಆರ್ಡರನ್ನು printercartridge@souharda.coop ಇ ಮೇಲ್ ಐಡಿಗೆ ಕಳುಹಿಸತಕ್ಕದ್ದು. 2055ಡಿ ಪ್ರಿಂಟರ್ ಕಾಟ್ರೇಜ್ ಬೆಲೆ ರೂ 4,330/– ಹಾಗೂ 401ಡಿ ಪ್ರಿಂಟರ್ ಕಾಟ್ರೇಜ್ ಬೆಲೆ ರೂ 4,800/–.
3. ಎಲ್ಲಾ ಎ.ಸಿ.ಸಿ.ಕೇಂದ್ರಗಳು ಇಪ್ರೆಸ್ಸ್ ಶಿಲ್ಕನ್ನು ಸಂಯುಕ್ತ ಸಹಕಾರಿಯಲ್ಲಿರುವ ತಮ್ಮ ಖಾತೆಯಲ್ಲಿರುವ ಶಿಲ್ಕಿನ ಜೊತೆ ತಾಳೆಮಾಡಿಕೊಳ್ಳತಕ್ಕದ್ದು. ಕಡ್ಡಾಯವಾಗಿ ಎಲ್ಲಾ ಎ.ಸಿ.ಸಿ.ಕೇಂದ್ರಗಳು ಸಂಯುಕ್ತ ಸಹಕಾರಿಯಲ್ಲಿರುವ ತಮ್ಮ ಖಾತೆಯಲ್ಲಿ ಧನಾತ್ಮಕ ಶಿಲ್ಕು ಹೊಂದರತಕ್ಕದ್ದು. ಒಂದು ವೇಳೆ ಯಾವುದಾದರೂ ಎ.ಸಿ.ಸಿ.ಕೇಂದ್ರಗಳು ನಿರಂತರ ನಕಾರಾತ್ಮಕ ಶಿಲ್ಕು ಹೊಂದುತ್ತಿದ್ದರೆ ಅಂತಹ ಎ.ಸಿ.ಸಿ.ಕೇಂದ್ರಗಳ ಮೇಲೆ ಕಠಿಣ ಕ್ರಮ ಕೈಗೊಂಡು ಎ.ಸಿ.ಸಿ.ಕೇಂದ್ರವನ್ನು ರದ್ದುಗೊಳಿಸಲಾಗುವುದು.
4. ಇ–ಸ್ಟಾಂಪ್ ಪಡೆಯುವ ಸಂದರ್ಭದಲ್ಲಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿ., (Stock Holding Corporation of India Ltd.) ರವರು ನೀಡಿರುವ ಮಾದರಿಯಲ್ಲಿಯೇ ಗ್ರಾಹಕರ ಅರ್ಜಿ ನಮೂನೆಗಳನ್ನು ಮುದ್ರಿಸತಕ್ಕದ್ದು ಮತ್ತು ಗ್ರಾಹಕರಿಗೆ ನಮೂನೆಯನ್ನು ಉಚಿತವಾಗಿ ನೀಡಬೇಕು.
5. ಎ.ಸಿ.ಸಿ. ಕೇಂದ್ರಗಳು ಸಂಯುಕ್ತ ಸಹಕಾರಿಯ ಅನುಮತಿ ನೀಡಿದ ಸ್ಥಳದಲ್ಲಿಯೇ ಇ–ಸ್ಟಾಂಪಿಂಗ್ ವ್ಯವಹಾರವನ್ನು ನಡೆಸತಕ್ಕದ್ದು. ಎ.ಸಿ.ಸಿ.ಕೇಂದ್ರಗಳು ಒಂದು ವೇಳೆ ವಿಳಾಸ ಬದಲಾವಣೆ ಹೊಂದಬೇಕಾದರೆ ಮೊದಲು ಸಂಯುಕ್ತ ಸಹಕಾರಿಗೆ ಪತ್ರವನ್ನು ಕಳುಹಿಸಬೇಕು ತದ ನಂತರ ಸಂಯುಕ್ತ ಸಹಕಾರಿಯಿಂದ ಅನುಮತಿ ದೊರೆತ ನಂತರ ಎ.ಸಿ.ಸಿ.ಕೇಂದ್ರ ಕೇಳಿದ ಬದಲಾವಣೆಯ ಸ್ಥಳದಲ್ಲಿ ವ್ಯವಹಾರ ನಡೆಸಬೇಕು. ಅನುಮತಿ ದೊರೆಯದೆ ಬದಲಾವಣೆ ಸ್ಥಳದಲ್ಲಿ ವ್ಯವಹಾರ ನಡೆಸಿದರೆ ಕಠಿಣ ಕ್ರಮ ಕೈಗೊಳ್ಳುವುದು.
6. ಸಹಕಾರಿಯ ವಿಳಾಸ ಮತ್ತು ಕಛೇರಿಯ ವೇಳೆಯನ್ನು ಕೌಂಟರ್‌ನ ಹೊರ ಭಾಗದಲ್ಲಿ ಸ್ಪಷ್ಟವಾಗಿ ನಮೂದಿಸಬೇಕು. ಬೆಳಗ್ಗೆ 10:00 ರಿಂದ ಸಂಜೆ 4:00ರವರೆಗೆ ಕಡ್ಡಾಯವಾಗಿ ಇ–ಸ್ಟಾಂಪಿಂಗ್ ನೀಡತಕ್ಕದ್ದು. ಮತ್ತು ನಿಮ್ಮ ಸದಸ್ಯರ ಹಿತಾಸಕ್ತಿ ಯಿಂದ ನಿಮ್ಮ ಕಛೇರಿಯ ಸಮಯಕ್ಕೆ ಅನುಗುಣವಾಗಿ ಇ–ಸ್ಟಾಂಪ್ ವಿತರಿಸುವ ವೇಳೆಯನ್ನಾಗಿ ಮಾಡಿಕೊಳ್ಳಬಹುದು. (ಬೆಳಗ್ಗೆ 10:00ರಿಂದ ಸಂಜೆ 6:00ರವರೆಗೆ) ಇದನ್ನು ನಿಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಹಾಕಬೇಕು.
7. ಇ–ಸ್ಟಾಂಪಿಂಗ್ ಸಿಬ್ಬಂದಿಯು ಸೇವೆಯಿಂದ ಬಿಡುಗಡೆಗೊಂಡಲ್ಲಿ / ವಜಾಗೊಂಡಲ್ಲಿ / ಬೇರೆ ಶಾಖೆಗೆ ವರ್ಗಾವಣೆಗೊಂಡಲ್ಲಿ ಅಂತಹ ಸಿಬ್ಬಂದಿಗಳಿಗೆ ನೀಡಿರುವ ಐ.ಡಿ ಯನ್ನು ತಕ್ಷಣದಿಂದ ನಿಷ್ಕ್ರಿಯ (De-Activation) ಗೊಳಿಸಲು ಕ್ರಮ ಕೈಗೊಳ್ಳಬೇಕು. ಎಲ್ಲಾ ಇ–ಸ್ಟಾಂಪ್ ಸಿಬ್ಬಂದಿ (user) ಮತ್ತು ಇ–ಸ್ಟಾಂಪ್ ಮೇಲ್ವಿಚಾರಕರು (supervisor)ಗಳು ವೈಯಕ್ತಿಕ ಇ–ಮೇಲ್ ಐಡಿಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಎಲ್ಲಾ ಗುಪ್ತ ಸಂಖ್ಯೆ ಮರುಹೊಂದಾಣಿಕೆ (Password Resets), ಹೊಸ ಐಡಿ ಮತ್ತು ಗುಪ್ತ ಸಂಖ್ಯೆ (Password) ಹಾಗೂ ಹೆಚ್ಚುವರಿ ಐಡಿ (Additional ID) ಮತ್ತು ಗುಪ್ತ ಸಂಖ್ಯೆಯನ್ನು (Password) ಅವರವರ ವೈಯಕ್ತಿಕ ಇ–ಮೇಲ್ ಐಡಿಗಳಿಗೆ ಕಳುಹಿಸಲಾಗುತ್ತದೆ ಹೊರತು ಬೇರೆಯವರ ಇ–ಮೇಲ್ ಐಡಿಗಳಿಗೆ ಕಳುಹಿಸಲಾಗುವುದಿಲ್ಲ.
8. ಇ–ಸ್ಟಾಂಪಿಂಗ್ ಪೇಪರ್‌ನ್ನು 80 ರಿಂದ 100 ಜಿ.ಎಸ್.ಎಮ್ ಬಾಂಡ್ ಪೇಪರ್‌ನಲ್ಲಿ ಮಾತ್ರ ಮುದ್ರಿಸಬೇಕು.
9. ನಿಮ್ಮ ಸಹಕಾರಿಯ ಇ–ಸ್ಟಾಂಪಿಂಗ್‌ನ ಸಿಬ್ಬಂದಿ ತಮ್ಮ ಗುಪ್ತ ಸಂಖ್ಯೆಯನ್ನು ಯಾವುದೇ ಕಾರಣಕ್ಕೂ ಬೇರೆಯವರೊಂದಿಗೆ ಹಂಚಿಕೊಳ್ಳತಕ್ಕದ್ದಲ್ಲ.
10. ಇ–ಸ್ಟಾಂಪಿಂಗ್ ಪೇಪರನ್ನು ವೈಯಕ್ತಿಕ ಅಥವಾ ಸಂಸ್ಥೆಯ ಹೆಸರಿನಲ್ಲಿ ಮಾತ್ರ ನೀಡಬೇಕು.
11. ಹಾಗೂ ಸಂಸ್ಥೆಗೆ ನೀಡುವಾಗ ಅಗತ್ಯ ದಾಖಲೆಗಳನ್ನು ಪರಿಶೀಲಿಸಿಯೇ ನೀಡಬೇಕು.
12. ಇ–ಸ್ಟಾಂಪ್ ಪೇಪರ್‌ನ ಮೇಲೆ ಯಾವುದೇ ತಿದ್ದುಪಡಿ ಮಾಡಬಾರದು.
13. ಗ್ರಾಹಕರಿಂದ ಪಡೆಯುವ ಸೇವಾ ಶುಲ್ಕಕ್ಕೆ ಸಹಕಾರಿಯಿಂದ

ಮುಂದಿನ ಪುಟಕ್ಕೆ...

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1/44/2014-16.
RNI No. KARBIL - 2004/18001. Pages 20



ದಿನಾಂಕ 11.12.2014ರಂದು ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಹಾಗೂ ಗಾಯತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಗಳಿಗೆ ಸಂಯುಕ್ತ ಸಹಕಾರಿ ಅಧ್ಯಕ್ಷರ ಭೇಟಿ.



ಶ್ರೀ ಆಂಜನೇಯ ಸಂಕಲ್ಪ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಕೆ.ಚಂದರಗಿ ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ.

# ಇ - ಸ್ಟಾಂಪಿಂಗ್ ಕೇಂದ್ರಗಳಿಗೆ ಮಾರ್ಗದರ್ಶಿ

...ಹಿಂದಿನ ಪುಟದಿಂದ

ಸ್ವೀಕೃತಿ/ರಸೀದಿಯನ್ನು ಕಡ್ಡಾಯವಾಗಿ ನೀಡಬೇಕು.

14. ಗ್ರಾಹಕರಿಂದ ಪಡೆಯುವ ಅರ್ಜಿ ನಮೂನೆಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳತಕ್ಕದ್ದು. ಲೆಕ್ಕಪರಿಶೋಧನೆಗೆ ನೀಡಬೇಕಾಗುತ್ತದೆ
15. ಸರಕಾರಿ ಆದೇಶಗಳಿಗೆ ಅನುಗುಣವಾಗಿ ಗ್ರಾಹಕರಿಂದ ಸೇವಾಶುಲ್ಕ ಪಡೆಯಬೇಕು. ರೂ.10/– ರಿಂದ 100/–ರವರೆಗೆ ಸೇವಾ ಶುಲ್ಕ ರೂ.10/–, ರೂ.101/– ರಿಂದ ರೂ.5,000/–ದವರೆಗೆ ಸೇವಾ ಶುಲ್ಕ ರೂ.15/– ಮತ್ತು ರೂ.5,000/–ಕ್ಕಿಂತ ಮೇಲ್ಪಟ್ಟ ಛಾಪಾ ಕಾಗದಗಳಿಗೆ ಯಾವುದೇ ಸೇವಾ ಶುಲ್ಕವನ್ನು ತೆಗೆದುಕೊಳ್ಳುವಂತಿಲ್ಲ.
16. ರೂ.50,000/– ಕ್ಕಿಂತ ಹೆಚ್ಚಿನ ಮೊತ್ತದ ಇ-ಸ್ಟಾಂಪ್ ವಿತರಿಸುವಾಗ ಸ್ಟಾಂಪ್ ಮೊತ್ತ ಪಾವತಿಸುವವರ ಪ್ಯಾನ್(PAN) ವಿವರವನ್ನು ಪಡೆಯಬೇಕು.
17. ಪ್ರತಿ ಇ-ಸ್ಟಾಂಪ್ ಮೇಲೆ ಕಛೇರಿಯ ಮೊಹರು ಹಾಕಿ ಇ-ಸ್ಟಾಂಪ್ ಸೂಪರ್‌ವೈಸರ್ ಸಹಿ ಮಾಡಬೇಕು.
18. ಇ-ಸ್ಟಾಂಪ್ ವಿತರಿಸುವ ಪೂರ್ವದಲ್ಲಿ ಇ-ಸ್ಟಾಂಪ್ ಸಿಬ್ಬಂದಿ (user) ಮತ್ತು ಇ-ಸ್ಟಾಂಪ್ ಮೇಲ್ವಿಚಾರಕರು (supervisor) ನಿಗದಿಪಡಿಸಿದ ಸ್ಥಳದಲ್ಲಿ ವಿಶಿಷ್ಟ ಗುರುತಿನ ಸಂಖ್ಯೆ ಮತ್ತು ಪ್ರಮಾಣಪತ್ರದ ಸಂಖ್ಯೆಯನ್ನು ನಮೂದಿಸಿ ಸಹಿ ಮಾಡಬೇಕು ಮತ್ತು ಗ್ರಾಹಕರಿಂದ ಸ್ವೀಕೃತಿ ಸಹಿ ಮತ್ತು ದೂರವಾಣಿ ಸಂಖ್ಯೆಯನ್ನು ಪಡೆಯಬೇಕು.

ಎ.ಸಿ.ಸಿ. ಮಾರ್ಗದರ್ಶಿಗಳನ್ನು ಪಾಲಿಸುವುದು ಅವಶ್ಯಕ. ಮಾರ್ಗದರ್ಶಿಗಳನ್ನು ಪಾಲಿಸದಿರುವುದು ಶಿಸ್ತು ಕ್ರಮಕ್ಕೆ ಅವಕಾಶವಾಗುತ್ತದೆ. ಇದನ್ನು ಗಮನಿಸಿ ಕಾರ್ಯನಿರ್ವಹಿಸಲು ಕ್ರಮವಿಡುವುದು.

## ಸಹಕಾರಿ ಕ್ಷೇತ್ರದಿಂದ ಎಲ್‌ಪಿಜಿ ಗ್ರಾಹಕರಿಗೆ ಪ್ರಥಮ ಸೌಲಭ್ಯ ಒದಗಿಸಿದ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್



ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ವತಿಯಿಂದ ಎಲ್‌ಪಿಜಿ ಗ್ಯಾಸ್ ಪಡೆಯುವ ಗ್ರಾಹಕರಿಗೆ ಬ್ಯಾಂಕಿನಲ್ಲಿ ಆಧಾರ್ ಕಾರ್ಡ್ ಇರಲಿ, ಇರದೇ ಇರಲಿ ಅವರಿಗೆ ನೇರ ಹಣ ವರ್ಗಾವಣೆ (LPG Direct benefit transfer to customers account in SUCO bank first in Co operative sector) ಮಾಡುವ ವಿಶೇಷ ಸೌಲಭ್ಯವನ್ನು ಕಲ್ಪಿಸಲಾಗಿದೆ, ಈಗಾಗಲೇ 200ಕ್ಕೂ ಹೆಚ್ಚು ಗ್ರಾಹಕರಿಗೆ ಈ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಶ್ರೀ ಮನೋಹರ್ ಮಸ್ಕಿಯವರು ತಿಳಿಸಿದ್ದಾರೆ.

ಬೆಳಗಾವಿ ವಿಭಾಗೀಯ ಕಛೇರಿ : ಪಿ&ಟಿ ಕ್ವಾಟ್ರಸ್ ಎದುರು, ಮಹಾಂತೇಶ್ ನಗರ, ಬೆಳಗಾವಿ – 590 017. ದೂರವಾಣಿ – 0831–2401551
ಬೆಂಗಳೂರು ವಿಭಾಗೀಯ ಕಛೇರಿ : ಶೀಘ್ರದಲ್ಲಿಯೇ ಈ ಕೆಳಗಿನ ವಿಳಾಸದಲ್ಲಿ ಕಾರ್ಯಾರಂಭ ಮಾಡಲಿದೆ.
#141, ಐ.ಕೆ.ಬ್ಲಾಕ್, 1ನೇ ಮೇನ್, 11ನೇ ಕ್ರಾಸ್, ಡಾ||ರಾಜಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010. ದೂರವಾಣಿ : 8884466708
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010